ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2018
ಬೆಲೆ ರೂ. 1




# ಮೋತಿಭಾಗ್‌ನಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಮೆಟ್ರೋ ಸ್ಟೇಷನ್

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 28 ಸಂಚಿಕೆ 10
ಜುಲೈ 2018, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


## ನೇರ ಮಾತು

ದೆಹಲಿಯಲ್ಲಿ ಕನ್ನಡಿಗರ ಅಸ್ತಿತ್ವದ ಪ್ರತೀಕವಾಗಿರುವ ಸಂಸ್ಥೆಗಳೆಂದರೆ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆ. ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಭಾಷಾ ಅಲ್ಪಸಂಖ್ಯಾತರಾಗಿರುವ ಕನ್ನಡಿಗರಿಗೆ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಮತ್ತು ಹೊರನಾಡಿನಲ್ಲಿ ಹೊಸ ತಲೆಮಾರಿಗೆ ಕೂಡಾ ಮಾತೃಭಾಷೆಯ ಅರಿವು ಬೇಕು ಎಂಬ ಉದ್ದೇಶದಿಂದ ದೆಹಲಿ ಕರ್ನಾಟಕ ಸಂಘದ ಅಂದಿನ ಪದಾಧಿಕಾರಿಗಳು ಮತ್ತು ಸದಸ್ಯರು 1959ರಲ್ಲಿ ದೆಹಲಿ ಕನ್ನಡ ಶಾಲೆಯನ್ನು ಆರಂಭಿಸಿದರು. ಸರಕಾರದ ಸಹಾಯದೊಂದಿಗೆ ಶಿಕ್ಷಣ ಸಂಸ್ಥೆಯನ್ನು ನಡೆಸಲು ಅದಕ್ಕೆ ತನ್ನದೇ ಆದ ನೀತಿನಿಯಮಾವಳಿಗಳು ಹಾಗೂ ಪ್ರತ್ಯೇಕವಾದ ಆಡಳಿತ ವ್ಯವಸ್ಥೆಯು ಕೂಡಾ ಬೇಕೆಂದು ದೆಹಲಿ ಕನ್ನಡ ಎಜ್ಯುಕೇಶನ್ ಸೊಸೈಟಿಯನ್ನು ಪ್ರಾರಂಭಿಸಲಾಯಿತು.

ದೆಹಲಿಯಲ್ಲಿ ಕನ್ನಡ ಚಟುವಟಿಕೆಗಳಲ್ಲಿ ಸಾರ್ವಜನಿಕವಾಗಿ ತೊಡಗಿಸಿಕೊಂಡಿರುವ ದೆಹಲಿಯ ಕನ್ನಡಿಗರು ಸಾಮಾನ್ಯವಾಗಿ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆ ತಮ್ಮ ಎರಡು ಕಣ್ಣುಗಳಿರುವ ಹಾಗೆಂದು ಜೋಪಾನವಾಗಿ ನೋಡಿಕೊಂಡು ಬಂದಿದ್ದಾರೆ. ಸಂಘ ಮತ್ತು ಶಾಲೆ ಇವೆರಡರ ಅಭಿವೃದ್ಧಿಗಾಗಿ ಶ್ರಮಿಸಿದವರು ಅನೇಕರು. ಅವರೆಲ್ಲರ ಶ್ರಮದ ಪರಿಣಾಮವಾಗಿ ಇಂದು ನವದೆಹಲಿಯ ಮುಖ್ಯ ಸ್ಥಳವಾದ ಲೋದಿ ಎಸ್ಟೇಟ್‌ನಲ್ಲಿ ಶಾಲೆ ಮತ್ತು ಆರ್‌ಕೆ ಪುರಂನಲ್ಲಿ ಸಂಘ ಇದೆ.

ಸಂಘವು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದರೆ ಶಾಲೆಯು ಶೈಕ್ಷಣಿಕ ಕೇಂದ್ರವಾಗಿ ಬೆಳೆಯಲು ಇನ್ನಷ್ಟು ಅವಕಾಶಗಳಿವೆ. ಸಂಘ ತನ್ನ ಆರಂಭದ ಕಷ್ಟದ ದಿನಗಳನ್ನು ಕಳೆದು ಇಂದು ಒಂದು ಸುಸ್ತಿರ ಸ್ಥಿತಿಗೆ ಬಂದಿದೆ. ಸಂಘವು ತನ್ನ ಮುಂದಿನ ಯೋಜನೆಗಳನ್ನು ಹಮ್ಮಿಕೊಳ್ಳುವಾಗ ದೆಹಲಿಯಲ್ಲಿರುವ ಕನ್ನಡಿಗರ ಏಕೈಕ ಕನ್ನಡ ಶಾಲೆಯ ಅಭಿವೃದ್ಧಿಯ ಕುರಿತು ಕೂಡಾ ಚಿಂತನೆ ನಡೆಸಬೇಕಾದುದು ದೆಹಲಿಯ ಕನ್ನಡಿಗರ ಕರ್ತವ್ಯವಾಗಿದೆ.

ಶಾಲೆಯಲ್ಲಿ ಕನ್ನಡಿಗರ ಮಕ್ಕಳ ಸಂಖ್ಯೆ ಕಡಿಮೆಯಾಗದಂತೆ ನೋಡಿಕೊಳ್ಳುವುದು ಇದರಲ್ಲಿ ಒಂದು ಮುಖ್ಯವಾದ ಕೆಲಸವಾಗಿದೆ. ದೆಹಲಿಯ ವಿವಿಧ ಬಡಾವಣೆಗಳಲ್ಲಿ ಮತ್ತು ರಾಷ್ಟ್ರೀಯ ರಾಜಧಾನಿ ಪರಿಸರದ ಗುರುಗಾಂವ್, ಫರಿದಾಬಾದ್, ನೋಯ್ಡಾ, ಘಾಜಿಯಾಬಾದ್, ಭಿವಾಡಿ ಮೊದಲಾದ ಕಡೆ ನೆಲೆಸಿರುವ ಕನ್ನಡಿಗರು ತಮ್ಮ ಮಕ್ಕಳನ್ನು ಲೋದಿ ಎಸ್ಟೇಟ್‌ನಲ್ಲಿರುವ ಕನ್ನಡ ಶಾಲೆಗೆ ಸೇರಿಸಲು ಅವರಿಗೆ ಯೋಗ್ಯವಾದ ಪ್ರಯಾಣ ಸೌಕರ್ಯ, ತಾತ್ಕಾಲಿಕ ನೆಲೆಯ ವಸತಿ ಸೌಕರ್ಯ, ಉತ್ತಮ ಫಲಿತಾಂಶ ತರಲು ತರಬೇತಿ ಪಡೆದ ಶಿಕ್ಷಕರ ನೇಮಕ ಮತ್ತು ವೃತ್ತಿಪರವಾದ ಆಡಳಿತ ವ್ಯವಸ್ಥೆಯನ್ನು ಒದಗಿಸಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಶಾಲೆಗೆ ಸಂಘವು ತನ್ನಿಂದಾದ ಸಹಾಯವನ್ನು ಮಾಡಲು ಪ್ರಯತ್ನಿಸುವ ಕುರಿತು ದೆಹಲಿ ಕನ್ನಡ ಎಜ್ಯುಕೇಶನ್ ಸೊಸೈಟಿಯ ಇತ್ತೀಚೆಗೆ ನಡೆದ ವಾರ್ಷಿಕ ಮಹಾಸಭೆಯಲ್ಲಿ ವಿವರವನ್ನು ನೀಡಲಾಯಿತು.

ದೆಹಲಿ ಕರ್ನಾಟಕ ಸಂಘದ ಈಗಿನ ಆಡಳಿತ ಮಂಡಳಿಯು ಸಂಘದಲ್ಲಿ ನಿರಂತರವಾಗಿ ಕಾರ್ಯಕ್ರಮಗಳನ್ನು ನಡೆಸಲು ರಾಜ್ಯ ಸರ್ಕಾರ ಮತ್ತು ಇತರೆಡೆಗಳಿಂದ ಆರ್ಥಿಕ ಸಹಾಯವನ್ನು ಪಡೆದುಕೊಂಡಿದೆ. ಜತೆಗೆ ಸಂಘದ ಸಮುಚ್ಛಯದ ಒಂದು ಭಾಗದಲ್ಲಿ ನಡೆಯುವ ವಾಣಿಜ್ಯ ವ್ಯವಹಾರದಿಂದ ಕೂಡಾ ವರಮಾನ ದೊರೆಯುತ್ತಿದೆ. ಹೀಗೆ ಬಂದ ವರಮಾನವನ್ನು ದುಂದುವೆಚ್ಚಗೊಳಿಸದೇ ಸಂಘದ ಅಥವಾ ದೆಹಲಿಯ ಕನ್ನಡಿಗರ ಮುಂದಿನ ಚಟುವಟಿಕೆಗಳಿಗೆ ಉಳಿತಾಯ ಮಾಡಿಕೊಂಡು ಬರಲಾಗಿದೆ. ಸದ್ಯಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಸಂಗ್ರಹವಾಗಿರುವ ಮೊತ್ತವನ್ನು ಜನೋಪಯೋಗಿ ಕಾರ್ಯಕ್ಕೆ ತೊಡಗಿಸಿಕೊಳ್ಳಬೇಕೆಂಬುದು ನಮ್ಮೆಲ್ಲರ ಬಯಕೆಯಾಗಿದೆ.

ದೆಹಲಿಗೆ ಉನ್ನತ ವ್ಯಾಸಂಗ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಕರ್ನಾಟಕದಿಂದ ಬರುವ ಆರ್ಥಿಕವಾಗಿ ಹಿಂದುಳಿದವರಿಗಾಗಿ ತಾತ್ಕಾಲಿಕವಾಗಿ ನೆಲೆಸಲು ದೆಹಲಿಯಲ್ಲಿ ಸುಸಜ್ಜಿತವಾದ ಹಾಸ್ಟೇಲ್ ಒಂದನ್ನು ನಿರ್ಮಿಸುವ ಕುರಿತು ಆಲೋಚನೆಗಳು ಬಂದಿದೆ. ಅದಕ್ಕಾಗಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಇತರೆಡೆಗಳಿಂದ ದೊರಕಬಹುದಾದ ನೆರವನ್ನು ಕೂಡಾ ಪಡೆಯಬೇಕಾಗಬಹುದು.

ಇಂತಹ ಹಾಸ್ಟೇಲ್‌ನ್ನು ಮಾಡುವಾಗ ನಾವು ದೆಹಲಿ ಕನ್ನಡ ಶಾಲೆಯು ಇದರಿಂದ ಯಾವ ರೀತಿಯ ಪ್ರಯೋಜನವನ್ನು ಪಡೆಯಬಹುದು ಎಂಬ ಕುರಿತು ಕೂಡಾ ಚಿಂತನೆ ಮಾಡಬೇಕಾಗಿದೆ. ಶಾಲೆಯ ಆವರಣದಲ್ಲಿ ಇಂತಹ ಹಾಸ್ಟೇಲ್‌ಗೆ ಜಾಗವಿದೆಯೇ ಎಂದು ತಿಳಿದುಕೊಳ್ಳಬೇಕು. ಶಾಲೆಗೆ ಬರುವ ಕನ್ನಡದ ವಿದ್ಯಾರ್ಥಿಗಳಿಗೆ ಇದರ ಉಪಯೋಗ ಯಾವ ರೀತಿಯಲ್ಲಿ ಮಾಡಬಹುದು ಎಂಬುದರ ಬಗ್ಗೆ ಕೂಡಾ ಆಲೋಚನೆ ಮಾಡಬೇಕಾಗಿದೆ.

ಇಂತಹ ಕಾರ್ಯಗಳಲ್ಲಿ ದೆಹಲಿಯ ಕನ್ನಡಿಗರೆಲ್ಲರೂ ಒಂದಾಗಿ ಹೊಸದೊಂದು ಕನಸನ್ನು ನನಸಾಗಿಸಲು ಪ್ರಯತ್ನಪಡುವರೆಂದು ನಾನು ಪ್ರಾಮಾಣಿಕವಾಗಿ ನಂಬಿದ್ದೇನೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***



DELHI KARNATAKA *SANGHA* Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

## ಮುನ್ನೋಟ

ಆತ್ಮೀಯ ಸದಸ್ಯರೇ,

ಬೇಸಿಗೆಯ ರಜೆಯ ನಂತರ ಎಲ್ಲ ಮಕ್ಕಳಿಗೆ ಶಾಲೆ ಪ್ರಾರಂಭವಾಗಿದೆ. ಅವರುಗಳಿಗೆ ಶುಭವಾಗಲಿ. ಸಂಘದಲ್ಲಿ ಕೂಡಾ ಸಾಂಸ್ಕೃತಿ ಕಾರ್ಯಕ್ರಮಗಳು ಪ್ರಾರಂಭವಾಗಲಿವೆ. ಸಂಘದ ಪಕ್ಕದಲ್ಲಿರುವ ಮೋತಿಭಾಗ್ ಮೆಟ್ರೋ ಸ್ಟೇಷನ್‌ಗೆ ಕರ್ನಾಟಕದ ಮಹಾನ್ ಚೇತನ ಸರ್.ಎಂ.ವಿಶ್ವೇಶ್ವರಯ್ಯನವರ ಹೆಸರನ್ನು ನಾಮಕರಣ ಮಾಡಲಾಗಿದೆ. ಈ ಮೆಟ್ರೋ ಸ್ಟೇಷನ್ ಉದ್ಘಾಟನೆಗೊಳ್ಳಲಿರುವ ಸಂದರ್ಭದಲ್ಲಿ ಕರ್ನಾಟಕವನ್ನು ಗುರುತಿಸುವ ವಿವಿಧ ಜಾನಪದ ನೃತ್ಯ ಕಾರ್ಯಕ್ರಮಗಳನ್ನು ಸ್ಟೇಷನ್ ಬಳಿ ಹಮ್ಮಿಕೊಳ್ಳಲಾಗುವುದು.

ನಮ್ಮ ಸಮಿತಿ ಬಂದ ನಂತರ ಕಾರ್ಯಕ್ರಮಗಳ ಜೊತೆಗೆ ದೆಹಲಿಯಲ್ಲಿ ಶಾಶ್ವತವಾಗಿ ಉಳಿಯುವ ಕೆಲಸವನ್ನು ಮಾಡಿದೆ. ಮೊದಲನೆಯದಾಗಿ ಜೆ.ಎನ್.ಯು.ವಿನಲ್ಲಿ ಕನ್ನಡ ಅಧ್ಯಯನ ಪೀಠ ಪ್ರಾರಂಭ, ಇದಕ್ಕೆ ಸಹಕರಿಸಿದ ಶ್ರೀ ದಯಾನಂದ, ಐ.ಎ.ಎಸ್. ಮತ್ತು ಮಾನ್ಯ ಮಾಜಿ ಸಚಿವೆ ಶ್ರೀಮತಿ ಉಮಾಶ್ರೀಯವರಿಗೆ ವಿಶೇಷ ಧನ್ಯವಾದಗಳು. ಎರಡನೆಯದಾಗಿ ಸಂಘದ ಪಕ್ಕದಲ್ಲಿರುವ ಮೆಟ್ರೋ ನಿಲ್ದಾಣಕ್ಕೆ ಸರ್.ಎಂ. ವಿಶ್ವೇಶ್ವರಯ್ಯ ಅವರ ಹೆಸರು ನಾಮಕರಣ. ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರ ವಿಶೇಷ ಮುತುವರ್ಜಿ ಮತ್ತು ಈಗಿನ ಮತ್ತು ಈ ಹಿಂದಿನ ಸಂಘದ ಪದಾಧಿಕಾರಿಗಳ ಸಹಕಾರದಿಂದ ಇದು ಸಾಧ್ಯವಾಯಿತು. ಅಲ್ಲದೆ ಇದಕ್ಕೆ ಸ್ಪಂದಿಸಿ ಸಹಕರಿಸಿದ ಕೇಂದ್ರ ಸಚಿವರುಗಳಾದ ಶ್ರೀ ಅನಂತಕುಮಾರ್, ಶ್ರೀ ಡಿ.ವಿ. ಸದಾನಂದ ಗೌಡ ಮತ್ತು ವಿಶೇಷವಾಗಿ ಶ್ರೀ ವೆಂಕಯ್ಯ ನಾಯ್ಡುರವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

**ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ**

**ಕಳೆದ ವರ್ಷದಂತೆ**

**ದೆಹಲಿ ಕಲಾವಿದರಿಂದ**

**ಭರತನಾಟ್ಯ–ಕಥಕ್–**

**ಒಡಿಸ್ಸಿ ನೃತ್ಯ ಕಾರ್ಯಕ್ರಮವನ್ನು**

**ಆಯೋಜಿಸಲಾಗಿದೆ. ಭಾಗವಹಿಸಲಿಚ್ಛಿಸುವ**

**ಕಲಾವಿದರು ಸಂಪರ್ಕಿಸಿ :**

**ಶ್ರೀಮತಿ ಪೂಜಾ ಪಿ. ರಾವ್ – 9810882498**
**(ಸಂಘದ ಸದಸ್ಯರಿಗೆ ಮಾತ್ರ)**





**REQUIRED**

**Executive with MBA**
**required for**
**Delhi Kannada Education Society,**
**Lodhi Estate, New Delhi – 110003**

**Apply before 23.07.2018**

## ಉಪನ್ಯಾಸ ಮಾಲೆ

**29.07.2018, ಭಾನುವಾರ**



**ಡಾ. ಭೀಮ ಭಟ್**
**ಅವರಿಂದ "ಪ್ರಕೃತಿಯ ಅನುಸಾರವಾಗಿ ಆಹಾರ ಮತ್ತು ಜೀವನ ಶೈಲಿ" ಉಪನ್ಯಾಸ**

ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ಆಯುರ್ವೇದ ವೈದ್ಯರಾದ **ಡಾ. ಭೀಮ ಭಟ್** ಅವರು ಮೂರು ದಶಕಗಳಿಂದ ಪ್ರತೀ ತಿಂಗಳ ಕೊನೆಯ ಭಾನುವಾರ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಾ ಬಂದಿದ್ದಾರೆ.
**ಜುಲೈ 29ರ ಭಾನುವಾರ ಅಪರಾಹ್ನ 3.00 ರಿಂದ 4.30 ರವರೆಗೆ "ಪ್ರಕೃತಿಯ ಅನುಸಾರವಾಗಿ ಆಹಾರ ಮತ್ತು ಜೀವನ ಶೈಲಿ" ಕುರಿತು ಉಪನ್ಯಾಸ ಹಾಗೂ ಸಂಜೆ : 4.30 ರಿಂದ 6.00 ರವರೆಗೆ ಉಚಿತ ವೈದ್ಯಕೀಯ ಸಲಹೆಯನ್ನು** ನೀಡಲಿದ್ದಾರೆ. ಸಂಘದ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಜುಲೈ, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಜುಲೈ, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 29 ಜುಲೈ, 2018ರಂದು ಬೆಳಿಗ್ಗೆ 11 ಗಂಟೆಯಿಂದ

**ಅಭಿಮತ ಪ್ರಧಾನ ಸಂಪಾದಕರು**
ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 28 ಸಂಚಿಕೆ 10
ಜುಲೈ 2018

ಅಭಿಮತ
ದೇನಾ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಪ್ರೌಢ ಮತ್ತು ಉನ್ನತ ಶಿಕ್ಷಣಗಳಲ್ಲಿ ಬದಲಾವಣೆಯ ಅಲೆ

ಕರ್ನಾಟಕದ ಹೊಸ ಸರಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ರಾಜ್ಯದಲ್ಲಿ ತೆರೆದ ಪುಸ್ತಕ ಪರೀಕ್ಷಾ ವಿಧಾನವನ್ನು ಅನುಸರಿಸುವ ಕುರಿತು ಎತ್ತಿದ ವಿಚಾರವು ನಿರಂತರವಾದ ಸುಧಾರಣೆಯನ್ನು ಕಾಣುತ್ತಿರಬೇಕಾದ ಶಿಕ್ಷಣಕ್ಷೇತ್ರದಲ್ಲಿ ಕಲಿಕಾ ಪ್ರಕ್ರಿಯೆಯ ಕುರಿತಾದ ಹೊಸ ಚರ್ಚೆಯೊಂದನ್ನು ರಾಜ್ಯಾದ್ಯಂತ ಹುಟ್ಟು ಹಾಕಿದೆ. ತೆರೆದ ಪುಸ್ತಕ ಪರೀಕ್ಷಾ ವಿಧಾನದ ಕುರಿತು ನಮ್ಮ ಶೈಕ್ಷಣಿಕ ತಜ್ಞರಲ್ಲಿ, ಶಿಕ್ಷಕವರ್ಗದಲ್ಲಿ ಮತ್ತು ಸಾಮಾನ್ಯ ಜನರಲ್ಲಿ ಯಾವ ಮಟ್ಟದ ಪರಿಕಲ್ಪನೆ ಇದೆ ಎಂಬುದು ಈ ಚರ್ಚೆಯ ಮುಖಾಂತರ ವಿಷದಗೊಂಡಿದೆ. 2016ರ ರಾಷ್ಟ್ರೀಯ ನೀತಿಯಲ್ಲಿ ಇನ್ನೂ ಪ್ರಸ್ತಾಪಿಸದೇ ಇರುವ ವಿಚಾರವನ್ನು ಮಾನ್ಯ ಸಚಿವರು ವ್ಯಕ್ತಪಡಿಸಿದ್ದಾರೆ. ಶಿಕ್ಷಣವು ಒಂದು ವೃತ್ತಿಗಾಗಿ ನಿರ್ದಿಷ್ಟ ಕೌಶಲ್ಯವನ್ನು ದೊರಕಿಸಿಕೊಡುವುದರ ಜತೆಗೆ ಬೌದ್ಧಿಕವಾಗಿ ಪ್ರಬುದ್ಧ ಜೀವನ ನಡೆಸಲು ಸಹಕಾರಿಯಾಗಬೇಕು. ಅಂತಹ ನೈಪುಣ್ಯತೆಯನ್ನು ಪಡೆಯಲು ಪುಸ್ತಕದಲ್ಲಿರುವ ವಿಚಾರಗಳನ್ನಷ್ಟೇ ಕಂಠಪಾಠ ಮಾಡಿದರೆ ಸಾಕಾಗುವುದಿಲ್ಲ. ತರಗತಿಗಳಲ್ಲಿ ಅಧ್ಯಾಪಕರು ವಿವರಿಸಿದ ಹಾಗೂ ಪುಸಕದಲ್ಲಿರುವ ವಿಚಾರಗಳನ್ನು ಮನನ ಮಾಡಿ ವಿದ್ಯಾರ್ಥಿಯು ಸೃಜನಾತ್ಮಕವಾಗಿ, ತಾರ್ಕಿಕವಾಗಿ ಮತ್ತು ತನ್ನದೇ ಸ್ವಂತ ಆಲೋಚನೆಯ ಮೂಲಕ ಕ್ಲಿಷ್ಟ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವ ಮನಸ್ಥಿತಿಯನ್ನು ರೂಪಿಸಿಕೊಳ್ಳುವಂತಿರಬೇಕು. ಇಂತಹ ಶಿಕ್ಷಣವನ್ನು ಪಡೆಯಲು ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ನೀಡುವ ಪಠ್ಯಗಳ ಬೋಧನೆಯ ಸ್ವರೂಪ ಮತ್ತು ಪರೀಕ್ಷೆಗಳಲ್ಲಿ ಕೇಳಲಾಗುವ ಪ್ರಶ್ನೆಗಳು ವಿಭಿನ್ನವಾಗಿರಬೇಕು. ಆಗ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಬರೆಯಲು ಪುಸ್ತಕಗಳನ್ನು ಒಯ್ದರೂ ಅದು ಅವರಿಗೆ ಕೇವಲ ಪರಿಶೀಲನೆಗೆ ಮಾತ್ರ ಉಪಯೋಗವಾಗುತ್ತದೆ. ಈಗಾಗಲೇ ಸೆಂಟ್ರಲ್ ಬೋರ್ಡ್ ಆಫ್ ಸೆಕಂಡರಿ ಎಜುಕೇಶನ್ 2014–15ರ ಸಾಲಿನಿಂದ ಒಂಭತ್ತನೇ ಮತ್ತು ಮೇಲಿನ ತರಗತಿಯ ಕೆಲವೊಂದು ವಿಷಯಗಳಲ್ಲಿ ತೆರೆದ ಪುಸ್ತಕ ಪರೀಕ್ಷಾ ವಿಧಾನವನ್ನು ಅಳವಡಿಸಿದೆ. ಕರ್ನಾಟಕದ ಸಚಿವರು ಎತ್ತಿದ ವಿಚಾರವನ್ನು ಶಿಕ್ಷಣಕ್ಷೇತ್ರದ ಪರಿಣಿತರು ವೈಜ್ಞಾನಿಕವಾಗಿ ಅವಲೋಕಿಸಿ ಕಾರ್ಯಗತಗೊಳಿಸಬೇಕು. ಹಲವಾರು ದೃಷ್ಟಿಕೋನಗಳಿಂದ ಈಗಾಗಲೇ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವ ಶಿಕ್ಷಣ ಕ್ಷೇತ್ರಕ್ಕೆ ಈ ರೀತಿಯ ಪರೀಕ್ಷಾ ವಿಧಾನವು ಮರುಚೇತನಗೊಳ್ಳಲು ಪೂರಕವಾಗಬೇಕು.

ಪ್ರೌಢಶಿಕ್ಷಣದಲ್ಲಿ ಇಂತಹ ಬದಲಾವಣೆಗಳ ಮುನ್ಸೂಚನೆಯು ರಾಜ್ಯ ಸರಕಾರದಿಂದ ದೊರೆತರೆ, ಉನ್ನತ ಶಿಕ್ಷಣದಲ್ಲಿಯೂ ಕೇಂದ್ರ ಸರಕಾರವು ಚಾರಿತ್ರಿಕ ಬದಲಾವಣೆಗಳನ್ನು ಮಾಡುವತ್ತ ಹೆಜ್ಜೆ ಇಟ್ಟಿದೆ. ಉನ್ನತ ಶಿಕ್ಷಣದ ಕ್ಷೇತ್ರದಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯ ಅನುದಾನ ಆಯೋಗವನ್ನು ರದ್ದುಗೊಳಿಸಿ ಭಾರತೀಯ ಉನ್ನತ ಶಿಕ್ಷಣ ಆಯೋಗ ರಚನೆಗೆ ಸಿದ್ಧತೆ ನಡೆದಿದೆ. ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತೆ ಒದಗಿಸುವುದು, ದೇಶದ ಶಿಕ್ಷಣ ವ್ಯವಸ್ಥೆಯ ಸಮಗ್ರ ಬೆಳವಣಿಗೆಗೆ ಅವಕಾಶ ಕಲ್ಪಿಸುವುದು ಮತ್ತು ಶಿಕ್ಷಣದಲ್ಲಿ ವಿಶ್ವ ಮಟ್ಟದ ಉತ್ಕೃಷ್ಟತೆಯನ್ನು ಸಾಧಿಸುವುದು ಹೊಸ ಆಯೋಗದ ಪ್ರಧಾನ ಆಶಯಗಳಾಗಿವೆ ಎಂದು ಸರಕಾರವು ನುಡಿದಿದೆ. ಈ ಆಯೋಗವು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವುದಲ್ಲದೇ ಪದವಿಗಳನ್ನು ನೀಡಲು ಮತ್ತು ಪಠ್ಯಗಳನ್ನು ರೂಪಿಸಲು ಅನುಮತಿ ನೀಡುವ ಅಧಿಕಾರವನ್ನು ಹೊಂದಲಿದೆ. ಆದರೆ, ಶಿಕ್ಷಣ ಸಂಸ್ಥೆಗಳಿಗೆ ನೀಡಲಾಗುತ್ತಿರುವ ಆರ್ಥಿಕ ಅನುದಾನವನ್ನು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ವ್ಯಾಪ್ತಿಯಲ್ಲಿರಿಸಲಾಗಿದೆ. ಜತೆಗೆ ಹೊಸ ಆಯೋಗದಲ್ಲಿ ಕೇಂದ್ರ ಸರಕಾರದ ವಿವಿಧ ಇಲಾಖೆಗಳ ಕಾರ್ಯದರ್ಶಿಗಳು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಯುಜಿಸಿಯನ್ನು ಪುನಶ್ಚೇತನಗೊಳಿಸುವ ಅವಶ್ಯಕತೆ ಇತ್ತಾದರೂ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸರಕಾರದ ನೇರ ಹಸ್ತಕ್ಷೇಪದಿಂದ ರಾಜಕೀಯ ಹಿತಾಸಕ್ತಿಗಳಿಗೆ ಹೆಚ್ಚು ಅವಕಾಶಗಳು ದೊರೆಯುವ ಸಾಧ್ಯತೆ ಇದೆ. ಉನ್ನತ ಶಿಕ್ಷಣವು ದೇಶದಲ್ಲಿ ವಿವಿಧ ವಿಷಯಗಳ ಕುರಿತು ಹೆಚ್ಚು ಹೆಚ್ಚು ಸಂಶೋಧನಾತ್ಮಕ ಅಧ್ಯಯನ ನಡೆಯುವಂತೆ ಪ್ರೇರಣೆ ನೀಡಬೇಕು. ವಿಶಾಲ ದೇಶದ ಸಾಮಾಜಿಕ, ಸಾಂಸ್ಕೃತಿಕ, ಭಾಷಾ ವೈವಿಧ್ಯಗಳನ್ನು ಆಧುನಿಕ ಲೋಕದಲ್ಲಿ ಹೊಸ ತಲೆಮಾರಿಗೆ ಆಸಕ್ತಿದಾಯಕಗೊಳಿಸಬೇಕು. ಅಲ್ಲದೇ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಾವು ಮುಂದುವರಿಯಬೇಕಾದ ಬಹುದೂರದ ಪಯಣಕ್ಕೆ ಸಂಶೋಧನೆಯ ಭದ್ರ ಅಡಿಪಾಯವನ್ನು ನೀಡುವಲ್ಲಿ ಉನ್ನತ ಶಿಕ್ಷಣವು ಆದ್ಯತೆಯನ್ನು ನೀಡಬೇಕು. ಅ

ಬಾಲಕೃಷ್ಣ ನಾಯ್ಕ್ ಡಿ.

# ಸಂಘದ ಪದಾಧಿಕಾರಿಗಳಿಂದ ಮುಖ್ಯಮಂತ್ರಿ ಭೇಟಿ





ಕರ್ನಾಟಕ ನೂತನ ಮುಖ್ಯಮಂತ್ರಿ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳೊಂದಿಗೆ ದೆಹಲಿಯ ಕರ್ನಾಟಕ ಭವನದಲ್ಲಿ ಇದೇ ಜೂನ್ 17ರಂದು ಭೇಟಿ ಮಾಡಿ ಅಭಿನಂದಿಸಿದರು.

ದೆಹಲಿ ಕರ್ನಾಟಕ ಸಂಘ ನಡೆದು ಬಂದ ದಾರಿ, ಈ ವರೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಮತ್ತು ಮುಂಬರುವ ಸಂಘದ ಯೋಜನೆಗಳನ್ನು ವಿವರಿಸಿದರು. ಸಂಘವು ರಾಜಧಾನಿಯಲ್ಲಿ ಉತ್ತಮ ಕೆಲಸ ಮಾಡುತ್ತಿದ್ದು ತಮ್ಮ ಎಲ್ಲಾ ಸಹಕಾರ ನೀಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿದರು. ಜಂಟಿ ಕಾರ್ಯದರ್ಶಿಗಳಾದ ಶ್ರೀ ಟಿ.ಪಿ. ಬೆಳ್ಳಿಯಪ್ಪ ಮತ್ತು ಶ್ರೀಮತಿ ಜಮುನಾ ಸಿ. ಮಠದ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ರಾಧಾಕೃಷ್ಣ, ಶ್ರೀ ಶಶಿಕಾಂತ ಪಾಟೀಲ್ ಮತ್ತು ಶ್ರೀ ಸಂತೋಷ್ ಜೆ ಹಾಜರಿದ್ದರು. ಅ



## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಭೇಟಿ

ದೆಹಲಿ ಕರ್ನಾಟಕ ಸಂಘದ ವತಿಯಿಂದ ನೂತನ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ಜಯಮಾಲಾ ಅವರನ್ನು ಇದೇ ಜೂನ್ 11ರಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಬೆಂಗಳೂರಿನ ಸಚಿವೆ ಅವರ ಸ್ವಗೃಹದಲ್ಲಿ ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು.

ದೆಹಲಿಯಲ್ಲಿ ವಾರ್ತಾ ಇಲಾಖೆಗೆ ಸರಿಯಾದ ವ್ಯವಸ್ಥೆ. ಕರ್ನಾಟಕ ಸಂಘಕ್ಕೆ ಮತ್ತು ಶಿಕ್ಷಣ ಸಂಸ್ಥೆಗೆ ಸಹಕಾರ. ಕರ್ನಾಟಕದ ಹೆಣ್ಣು ಮಕ್ಕಳಿಗೆ ವಸತಿ ನಿಲಯ, ತುಳು ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆ ಎಂದು ಪರಿಗಣಿಸುವುದು ಮೊದಲಾದ ವಿಚಾರಗಳ ಕುರಿತು ಸಮಲೋಚಿಸಲಾಯಿತು. ಅ

*ಅಭಿಮತ ವರದಿ*

### ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಿಗ ಸಾಧಕರ ಹೆಸರು ಅಜರಾಮರಗೊಳಿಸುವಲ್ಲಿ ದೆಹಲಿ ಕರ್ನಾಟಕ ಸಂಘದ ಪ್ರಯತ್ನ

# ನವದೆಹಲಿಯ ಮೋತಿಭಾಗ್ ಮೆಟ್ರೋ ಸ್ಟೇಷನ್‌ಗೆ ಸರ್ ಎಂ. ವಿಶ್ವೇಶ್ವರಯ್ಯ ನಾಮಕರಣ



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತ ಸಾಂಸ್ಕೃತಿಕ ಸಮುಚ್ಛಯದ ಅಂಚಿನಲ್ಲಿ ಇರುವ ಮೋತಿಭಾಗ್ ಮೆಟ್ರೋ ಸ್ಟೇಷನ್‌ಗೆ "ಸರ್ ಎಂ ವಿಶ್ವೇಶ್ವರಯ್ಯ ಮೋತಿಭಾಗ್" ಎಂಬ ಹೆಸರನ್ನು ನೀಡಿ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಕನ್ನಡಿಗ ಸಾಧಕರೊಬ್ಬರ ಹೆಸರು ಅಜರಾಮರವಾಗಲಿದೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಘದಲ್ಲಿ ಜೂನ್ 23 ರಂದು ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮಾತಾಡುತ್ತಾ ಹೇಳಿದರು.

ನವದೆಹಲಿಯ ಮಜ್ಲಿಸ್ ಪಾರ್ಕ್‌ನಿಂದ ಶಿವವಿಹಾರ್‌ವರೆಗಿನ 59 ಕಿಲೋ ಮೀಟರ್ ಉದ್ದದ ಪಿಂಕ್‌ಲೈನ್ ಮೆಟ್ರೋದ ದಾರಿಯಲ್ಲಿ ಬರುವ ಮೋತಿಭಾಗ್ ಸ್ಟೇಷನ್ ಬಹಳ ಮುಖ್ಯವಾದ ಮೆಟ್ರೋ ಸ್ಟೇಷನ್ ಆಗಿದ್ದು ಅದರ ನಾಮಕರಣವನ್ನು "ಸರ್ ಎಂ ವಿಶ್ವೇಶ್ವರಯ್ಯ ಮೋತಿಭಾಗ್" ಎಂದಿಡಲು ದೆಹಲಿ ಕರ್ನಾಟಕ ಸಂಘವು ಕೇಂದ್ರ ಸರಕಾರ ಮತ್ತು ದೆಹಲಿ ಮೆಟ್ರೋ ರೈಲು ಕಾರ್ಪೋರೇಶನ್ ಜತೆ ಅನೇಕ ಪತ್ರವ್ಯವಹಾರವನ್ನು ಮಾಡಿದಲ್ಲದೇ, ಕನ್ನಡಿಗರೊಬ್ಬರ ಹೆಸರನ್ನಿಡಲು ತೀವ್ರವಾದ ಗುಣಾತ್ಮಕ ಲಾಬಿಯನ್ನು ನಡೆಸಿದೆ ಎಂದು ಅವರು ತಿಳಿಸಿದರು.

ಆರಂಭದಲ್ಲಿ ಮೆಟ್ರೋ ರೈಲು ನಿಲ್ದಾಣಗಳಿಗೆ ಆ ಪರಿಸರದ ಹೆಸರನ್ನು ಬಿಟ್ಟು ಇತರ ಹೆಸರನ್ನು ನೀಡುವ ಸಂಪ್ರದಾಯವಿರಲಿಲ್ಲ. ಆದರೆ ಸಂಘದ ಸಮುಚ್ಛಯದ ಸಮೀಪದಲ್ಲಿಯೇ ಹಾದುಹೋಗುವ ಈ ಮೆಟ್ರೋ ರೈಲಿನ ನಿಲ್ದಾಣಕ್ಕೆ ದೆಹಲಿ ಕರ್ನಾಟಕ ಸಂಘ ನಿಲ್ದಾಣ ಎಂಬ ಹೆಸರಿಡಬೇಕು ಎಂದು ಕೂಡಾ ಒತ್ತಾಯಿಸಲಾಗಿತ್ತು. ಆದರೆ ದೆಹಲಿ ಮೆಟ್ರೋ ರೈಲು ಕಾರ್ಪೋರೇಶನ್‌ನ ನಿಯಮದಂತೆ ಸಂಘದ ಹೆಸರು ಅಲ್ಲದಿದ್ದರೆ, ಕನ್ನಡಿಗ ಸಾಧಕನೊಬ್ಬನ ಹೆಸರನ್ನು ಇಡಬೇಕು ಎಂದು ಮಾಜಿ ಕೇಂದ್ರ ಸಚಿವ ಶ್ರೀ ಆಸ್ಕರ್ ಫೆರ್ನಾಂಡಿಸ್ ಅವರ ಮೂಲಕ 2013ರಲ್ಲಿ ಅಂದಿನ ಕೇಂದ್ರ ಸರಕಾರದ ನಗರಾಡಳಿತ ಸಚಿವ ಶ್ರೀ ಕಮಲ್‌ನಾಥ್ ಅವರಿಗೆ ಮನವಿಯನ್ನು ಸಲ್ಲಿಸಲಾಗಿತ್ತು. ಕೇಂದ್ರದಲ್ಲಿ ಸರಕಾರವು ಬದಲಾದ ನಂತರ ಮತ್ತೆ ಪುನಃ ಸರಕಾರದ ಅಂದಿನ ನಗರಾಡಳಿತ ಸಚಿವರಾಗಿದ್ದ ಶ್ರೀ ವೆಂಕಯ್ಯ ನಾಯ್ಡು ಅವರಿಗೆ ಮನವಿಯನ್ನು ಸಲ್ಲಿಸಲಾಯಿತು. ಸಂಘದ ಕಾರ್ಯಕಾರಿ ಸಮಿತಿಯು ನಿರಂತರವಾಗಿ ಕೇಂದ್ರ ಸಚಿವರನ್ನು ಒತ್ತಾಯಿಸಿದ ಪರಿಣಾಮವಾಗಿ ಮೆಟ್ರೋ ಸ್ಟೇಷನ್‌ಗೆ ಸರ್ ಎಂ ವಿಶ್ವೇಶ್ವರಯ್ಯ ಅವರ ಹೆಸರು ಬಂದಿದೆ. ಇದಕ್ಕಾಗಿ ಸಂಘದ



**"ಸಂಘದ ಕಾರ್ಯಕಾರಿ ಸಮಿತಿಯು ನಿರಂತರವಾಗಿ ಕೇಂದ್ರ ಸಚಿವರನ್ನು ಒತ್ತಾಯಿಸಿದ ಪರಿಣಾಮವಾಗಿ ಮೆಟ್ರೋ ಸ್ಟೇಷನ್‌ಗೆ ಸರ್ ಎಂ ವಿಶ್ವೇಶ್ವರಯ್ಯ ಅವರ ಹೆಸರು ಬಂದಿದೆ. ಇದಕ್ಕಾಗಿ ಸಂಘದ ಮಾಜಿ ಅಧ್ಯಕ್ಷ ಹಾಗೂ ಮಾಜಿ ಪ್ರಿನ್ಸಿಪಲ್ ಇನ್‌ಫಾರ್ಮೇಶನ್ ಆಫೀಸರ್ ದಿವಂಗತ ಐ. ರಾಮಮೋಹನ್ ರಾವ್ ಅವರು ಸೇರಿದಂತೆ ಅನೇಕರು ಸಲಹೆ ಮತ್ತು ಪ್ರೋತ್ಸಾಹವನ್ನು ನೀಡಿದ್ದಾರೆ ಎಂದು ಶ್ರೀ ವಸಂತ ಶೆಟ್ಟಿ ಅವರು ವಿವರಿಸಿದರು."**





ಮಾಜೀ ಅಧ್ಯಕ್ಷ ಹಾಗೂ ಮಾಜೀ ಪ್ರಿನ್ಸಿಪಲ್ ಇನ್‌ಫಾರ್ಮೇಶನ್ ಆಫೀಸರ್ ದಿವಂಗತ ಐ. ರಾಮಮೋಹನ್ ರಾವ್ ಅವರು ಸೇರಿದಂತೆ ಅನೇಕರು ಸಲಹೆ ಮತ್ತು ಪ್ರೋತ್ಸಾಹವನ್ನು ನೀಡಿದ್ದಾರೆ ಎಂದು ಶ್ರೀ ವಸಂತ ಶೆಟ್ಟಿ ಅವರು ವಿವರಿಸಿದರು.

ಸಂಘದ ಬಾಗಿಲಿಗೆ ಮೆಟ್ರೋ ರೈಲಿನ ಓಡಾಟದ ಆರಂಭ ಸದ್ಯದಲ್ಲಿಯೇ ಆಗಲಿದೆ. ಇದೇ ಎಪ್ರಿಲ್ 24ರಿಂದ ಟ್ರಯಲ್ ರನ್ ಆರಂಭವಾಗಿದ್ದು, ಮೆಟ್ರೋ ಓಡಾಟಕ್ಕೆ ಎಲ್ಲಾ ಏರ್ಪಾಡುಗಳು ನಡೆದಿವೆ. ಅಲ್ಲದೇ ಮೆಟ್ರೋ ಸ್ಟೇಷನ್‌ನ ಹೆಸರು ಕೂಡಾ ಹಾಕಲಾಗಿದೆ. ನವದೆಹಲಿಯ ಪ್ರಮುಖ ರಸ್ತೆಯೊಂದರಲ್ಲಿ ಪ್ರಯಾಣಿಸುತ್ತಿರುವಾಗ ಸರ್ ಎಂ ವಿಶ್ವೇಶ್ವರಯ್ಯ ಅವರ ಹೆಸರನ್ನು ನೋಡುವುದೇ ಕನ್ನಡಿಗರಾದ ನಮಗೆಲ್ಲ ಬಹಳ ಹೆಮ್ಮೆಯ ಸಂದರ್ಭವಾಗಿದೆ. ರಾಷ್ಟ್ರಪತಿ ಭವನ, ಪಾರ್ಲಿಮೆಂಟು, ವಿದೇಶಿ ರಾಯಭಾರಿ ಕಚೇರಿಗಳು, ವಿವಿಧ ರಾಜ್ಯಗಳ ಭವನಗಳು, ಕೇಂದ್ರ ಸಚಿವರ ಮತ್ತು ಸರಕಾರದ ಉನ್ನತಾಧಿಕಾರಿಗಳ






ನಿವಾಸಗಳಿರುವ ಪ್ರದೇಶದಿಂದ ನವದೆಹಲಿಯ ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ಪ್ರಮುಖ ರಸ್ತೆಯಾದ ರಾವ್ ತುಲಾರಾಮ್ ಮಾರ್ಗವು "ಸರ್ ಎಂ ವಿಶ್ವೇಶ್ವರಯ್ಯ ಮೋತಿಭಾಗ್" ಮೆಟ್ರೋ ನಿಲ್ದಾಣ ಮತ್ತು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದಿಂದಲೇ ಆರಂಭಗೊಳ್ಳುತ್ತದೆ.

ನವದೆಹಲಿಯಲ್ಲಿ ಸರ್ ಎಂ ವಿಶ್ವೇಶ್ವರಯ್ಯ ಅವರ ಹೆಸರನ್ನು ಮೆಟ್ರೋ ನಿಲ್ದಾಣಕ್ಕೆ ನೀಡಿ ಕನ್ನಡಿಗರ ಕನ್ನಡದ ಅಸ್ಮಿತತೆಯನ್ನು ರಾಷ್ಟ್ರ ರಾಜಧಾನಿಯಲ್ಲಿ ಮೆರೆಯುವಂತೆ ಮಾಡಿದ ಕೇಂದ್ರ ಸರಕಾರ, ಸರಕಾರದ ವಿವಿಧ ಸಚಿವರು, ಕರ್ನಾಟಕದ ಸಂಸತ್ ಸದಸ್ಯರು, ಮಾಧ್ಯಮದ ಮಿತ್ರರು ಮತ್ತು ದೆಹಲಿ ಕರ್ನಾಟಕ ಸಂಘದ ಎಲ್ಲಾ ಹಿತಚಿಂತಕರಿಗೆ ಸಂಘದ ಕಾರ್ಯಕಾರಿ ಸಮಿತಿಯು ತನ್ನ ಆಭಾರವನ್ನು ವ್ಯಕ್ತಪಡಿಸುತ್ತದೆ.

ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಸಾಂಸ್ಕೃತಿಕ ಕುರುಹನ್ನು ಅಚ್ಚಳಿಯದಂತೆ ಮಾಡುವ ಪ್ರಯತ್ನವು ತಾನು ಅಧ್ಯಕ್ಷನಾಗಿರುವ ಸಂದರ್ಭದಲ್ಲಿ ನಡೆದಿರುವುದು ತನಗೆ ಹೆಮ್ಮೆ ಮತ್ತು ಸಂತೋಷದಾಯಕ ವಿಚಾರವಾಗಿದೆ ಎಂದು ಅವರು ಹೇಳಿದರು. ದೆಹಲಿ ಕರ್ನಾಟಕ ಸಂಘವು ಕಳೆದ ನಾಲ್ಕು ವರ್ಷಗಳಲ್ಲಿ ದೆಹಲಿಯಲ್ಲಿ ದಾಖಲೆಯ ಕನ್ನಡ ಕಾರ್ಯಕ್ರಮಗಳನ್ನು ನಡೆಸಿರುವುದರ ಜತೆಗೆ ಇಂತಹ ದೂರದೃಷ್ಟಿಯ ಕಾರ್ಯಕ್ರಮಗಳನ್ನು ಮಾಡುತ್ತಿರುವುದರಿಂದ ಸಂಘವು ಕೇವಲ ದೆಹಲಿ ಮತ್ತು ಸುತ್ತಲಿನ ಕನ್ನಡಿಗರ ಸಾಂಸ್ಕೃತಿಕ ಕೇಂದ್ರವಾಗಿರದೇ ಕರ್ನಾಟಕದ ನುಡಿಗಳ, ನಾಡಿನ ಜನ, ನೆಲ ಮತ್ತು ಜಲದ ವಿಚಾರವಾಗಿಯೂ ಗಂಭೀರವಾದ ಚಿಂತನೆಗಳನ್ನು ಮಾಡುವ ಸಾಮಾಜಿಕ ಕೇಂದ್ರವಾಗಿದೆ ಎಂದು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಿವರಿಸಿದರು.

ದೆಹಲಿ ಕರ್ನಾಟಕ ಸಂಘವು ತನ್ನ ವಿಶಿಷ್ಟ ಕಾರ್ಯಕ್ರಮಗಳ ಮೂಲಕ ದೇಶದ ಇನ್ನಿತರ ಕನ್ನಡ ಸಂಘಗಳಿಗಿಂತ ವಿಭಿನ್ನವಾಗಿದೆ. ನವದೆಹಲಿಯ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷಾ ಪೀಠದ ಸ್ಥಾಪನೆ, ಕರ್ನಾಟಕದಿಂದ ಐಎಎಸ್ ಪರೀಕ್ಷೆ ಬರೆಯಲು ಬರುವ ಯುವಕರಿಗೆ ತಾತ್ಕಾಲಿಕ ವಾಸ್ತವ್ಯ, ಪ್ರತಿಷ್ಠಿತ ಶಿವರಾಮ ಕಾರಂತ ಪ್ರಶಸ್ತಿ, ಡಾ. ಸರೋಜಿನಿ ಮಹಿಷಿ ಪ್ರಶಸ್ತಿ, ರಂಗಭೂಮಿ ಪ್ರಶಸ್ತಿ, ನವದೆಹಲಿಯಲ್ಲಿರುವ ಪ್ರತಿಭಾವಂತ ಹಾಗೂ ಆರ್ಥಿಕವಾಗಿ ಅನಾನುಕೂಲದಲ್ಲಿರುವ ಕನ್ನಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್, ಪ್ರತಿವಾರ ನುರಿತ ಕನ್ನಡಿಗ ವೈದ್ಯಕೀಯ ತಜ್ಞರಿಂದ ಅಪೇಕ್ಷಿತರಿಗೆ ಉಚಿತ ಸಲಹೆಯ ಅನುಕೂಲತೆ, ಇತರ ಕನ್ನಡ ಸಂಸ್ಥೆಗಳಿಗೆ ರಿಯಾಯತಿ ದರದಲ್ಲಿ ಸಂಘದ ಸಭಾಂಗಣವನ್ನು ಉಪಯೋಗಿಸಲು ದೊರಕಿಸುವುದು, ನಾಡಿನ ವಿಶೇಷವಾಗಿ ಗ್ರಾಮೀಣ ಪ್ರದೇಶದ ಹಾಗೂ ದೆಹಲಿಯ ಚಿತ್ರಕಲಾವಿದರಿಗೆ ಸಂಘದ ಆರ್ಟ್ ಗ್ಯಾಲರಿಯನ್ನು ನೀಡುವುದು ಮುಂತಾದ ಜನಪರವಾದ ಹಾಗೂ ಕರ್ನಾಟಕದ ಸುಸಂಸ್ಕೃತಿಯನ್ನು ಬಿಂಬಿಸುವ ಅನೇಕ ಕಾರ್ಯಕ್ರಮಗಳನ್ನು ದೆಹಲಿ ಕರ್ನಾಟಕ ಸಂಘವು ಹಮ್ಮಿಕೊಂಡಿದೆ ಎಂದು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ತಿಳಿಸಿದರು.

ರಾಜ್ಯದಲ್ಲಿ ಹೊಸ ಸರಕಾರವು ಅಧಿಕಾರವನ್ನು ಸ್ವೀಕರಿಸಿದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ಅಭಿನಂದಿಸಿದ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯು ನವದೆಹಲಿಯಲ್ಲಿ ಕರ್ನಾಟಕದ ಕೆಲಸಗಳನ್ನು ನಡೆಸಲು ರಾಜ್ಯ ಸರಕಾರವು ಮತ್ತಷ್ಟು ಪ್ರೋತ್ಸಾಹವನ್ನು ನೀಡುವ ಭರವಸೆಯನ್ನು ಹೊಂದಿದೆ. ಮುಖ್ಯಮಂತ್ರಿಯಲ್ಲದೇ ಇತರ ಮಂತ್ರಿಗಳನ್ನು ಕೂಡಾ ಸಂಪರ್ಕಿಸಿ ಸಂಘದ ಮುಂದಿನ ಯೋಜನೆಗಳ ಕುರಿತು ಪ್ರಾಥಮಿಕ ವಿವರಗಳನ್ನು ನೀಡಲಾಗುವುದು. ದೆಹಲಿಯಲ್ಲಿ ವೃತ್ತಿಯಲ್ಲಿರುವ ಮಹಿಳೆಯರಿಗೆ ಹಾಸ್ಟೆಲ್ ವ್ಯವಸ್ಥೆ ಮೊದಲಾದ ವಿಸ್ತೃತ ಯೋಜನೆಗಳನ್ನು ಹಾಕಲಾಗಿದೆ ಎಂದು ಅವರು ತಿಳಿಸಿದರು.

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು 1912ರಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿ ನೇಮಕಗೊಂಡರು. ಅವರು ನಿರ್ಮಿಸಿದ ಕೃಷ್ಣರಾಜ ಸಾಗರ ಅಣೆಕಟ್ಟು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಸಕ್ಕರೆ ಕಾರ್ಖಾನೆ, ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬೆಂಗಳೂರಿನಲ್ಲಿ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್(ಎಚ್‌ಎಎಲ್), ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಕನ್ನಡ ಸಾಹಿತ್ಯ ಪರಿಷತ್, ಜೋಗದ ಜಲವಿದ್ಯುತ್ ಯೋಜನೆ ವಿಶ್ವೇಶ್ವರಯ್ಯನವರನ್ನು ಅಜರಾಮರನನ್ನಾಗಿಸಿವೆ. ಅವರು ಕೇವಲ ಮೈಸೂರು ಪ್ರಾಂತ್ಯವಲ್ಲದೇ ದೇಶದ ವಿವಿದೆಡೆ ಹಲವಾರು ದೂರದೃಷ್ಟಿಯ, ಉನ್ನತ ತಂತ್ರಜ್ಞಾನಗಳ ಇಂಜಿನೀಯರಿಂಗ್ ಕಾರ್ಯಗಳನ್ನು ನೆರವೇರಿಸಿದ್ದಾರೆ. ಬ್ರಿಟಿಷ್ ಸರಕಾರವು ಅವರಿಗೆ ನೈಟ್ ಪದವಿಯನ್ನು ನೀಡಿದರೆ ಭಾರತ ಸರಕಾರವು ಅತ್ಯಂತ ಗೌರವಯುತವಾದ ಭಾರತರತ್ನ ಪ್ರಶಸ್ತಿಯನ್ನು ನೀಡಿದೆ. ದೆಹಲಿಯಲ್ಲಿ ಕರ್ನಾಟಕದ ಪ್ರಾತಿನಿಧ್ಯವನ್ನು ಕಲೆ, ಸಂಸ್ಕೃತಿ, ಶಿಕ್ಷಣ, ಭಾಷೆ, ಸಾಹಿತ್ಯದ ಮೂಲಕ ಬೆಳೆಸುತ್ತಿರುವ ದೆಹಲಿ ಕರ್ನಾಟಕ ಸಂಘವು ಕರ್ನಾಟಕದ ಮಹಾನ್ ಚೇತನವನ್ನು ದೆಹಲಿಯಲ್ಲಿ ಶಾಶ್ವತವನ್ನಾಗಿಸಲು ಮಾಡಿದ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿದೆ. ಅ

***ಅಭಿಮತ ವರದಿ***






# ಆಯುರ್ವೇದದಿಂದ ಆರೋಗ್ಯ ಉಪನ್ಯಾಸ ಮಾಲೆಯ ಉಪನ್ಯಾಸ

ಆಯುರ್ವೇದ ವೈದ್ಯ ಡಾ. ಭೀಮ ಭಟ್ಟ ಅವರು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾ ಭವನದಲ್ಲಿ ಆಯುರ್ವೇದದಿಂದ ಆರೋಗ್ಯ" ಉಪನ್ಯಾಸ ಮಾಲೆಯ ಮೂರನೆಯ ಉಪನ್ಯಾಸ ನೀಡುತ್ತಾ "ಪ್ರಕೃತಿ ಮತ್ತು ಆಹಾರದ ಬಗ್ಗೆ ವಿವರವಾಗಿ ಹೇಳಿದರು. ಆಯುರ್ವೇದದ ಈ ಜ್ಞಾನ ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಆರೋಗ್ಯವನ್ನು ಕಾಪಾಡಲು ಮತ್ತು ರೋಗ ಬಾರದಂತೆ ಮಾಡಲು ತಿಳಿದುಕೊಳ್ಳುವುದು ಬಹಳ ಉಪಯೋಗ ಎಂದರು.

ಪ್ರಪಂಚದಲ್ಲಿ ಎಲ್ಲ ವಸ್ತುಗಳನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ – ಜೀವ ಮತ್ತು ನಿರ್ಜೀವ ವಸ್ತು. ಎಲ್ಲ ವಸ್ತುಗಳೂ ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿ ಎಂಬ ಐದು ಪಂಚಭೂತಗಳಿಂದ ಮಾಡಲ್ಪಟ್ಟಿವೆ. ಎಲ್ಲಾ ಜೀವಿಗಳಲ್ಲಿಯೂ ಪಂಚಮಹಾಭೂತಗಳು ಇರುತ್ತವೆ. ಜೀವವಸ್ತುಗಳಲ್ಲಿ ದೇಹ, ಮನಸ್ಸು ಮತ್ತು ಆತ್ಮಗಳು ಅನ್ಯೋನ್ಯವಾಗಿ ಕೂಡಿಕೊಂಡಿರುತ್ತವೆ. ಗರ್ಭಧಾರಣೆಯ ಸಂದರ್ಭದಲ್ಲಿ ವೀರ್ಯ ಮತ್ತು ಅಂಡಾಶಯಗಳು ಜೋಡಣೆಯಾದಾಗ ಪಂಚಮಹಾಭೂತಗಳೂ, ತ್ರಿದೋಷ (ವಾತ, ಪಿತ್ತ ಮತ್ತು ಕಫ ದೋಷಗಳು) ಮತ್ತು ಸತ್ವ, ರಜಸ್ಸು, ತಮಸ್ಸು (ಮಾನಸಿಕ ಗುಣಗಳು) ಎಷ್ಟೆಷ್ಟು ಪ್ರಮಾಣ ಮತ್ತು ಗುಣದಲ್ಲಿ ಸೇರಿಕೊಂಡಿವೆ ಎಂಬ ಆಧಾರದ ಮೇಲೆ ಆ ಜೀವಿಯ ಶಾರೀರಿಕ ಮತ್ತು ಮಾನಸಿಕ ಪ್ರಕೃತಿ ನಿರ್ಧಾರವಾಗುತ್ತದೆ ಎಂದು ಡಾ. ಭೀಮ ಭಟ್ಟ ಅವರು ವಿವರಿಸಿದರು. ಆಯುರ್ವೇದದ ಪ್ರಕಾರ ಮೂರು ಮುಖ್ಯ ಶಾರೀರಿಕ ಪ್ರಕೃತಿ (ವಾತ, ಪಿತ್ತ, ಕಫ ಪ್ರಕೃತಿ) ಮತ್ತು ಮೂರು ಮುಖ್ಯ ಮಾನಸಿಕ ಪ್ರಕೃತಿ (ಸತ್ವ, ರಜಸ್ಸು, ತಮ್ಮಸ್ಸು) ಪ್ರತಿಯೊಬ್ಬ ಮನುಷ್ಯನಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಕೂಡಿಕೊಂಡಿರುತ್ತದೆ. ದೇಹದ ಮತ್ತು ಮನಸ್ಸಿನ ಲಕ್ಷಣಗಳಿಂದ ಪ್ರತಿಯೊಬ್ಬ ಮನುಷ್ಯನ ಪ್ರಕೃತಿಯನ್ನು ಅರ್ಥಮಾಡಿಕೊಳ್ಳಬಹುದು. ಪ್ರತಿಯೊಬ್ಬನಲ್ಲಿ ವಾತ, ಪಿತ್ತ, ಕಫದೋಷ ಮತ್ತು ಸತ್ವ, ರಜಸ್ಸು, ತಮಸ್ಸು ಬೇರೆ ಬೇರೆ ಪ್ರಮಾಣದಲ್ಲಿರುವುದರಿಂದ ಎಲ್ಲರಲ್ಲಿಯೂ ಮೂರು ಪ್ರಕೃತಿಯ ಮಿಶ್ರಣ ಇರುತ್ತದೆ. ಯಾವ ದೈಹಿಕ ದೋಷ ಮತ್ತು ಮಾನಸಿಕ ಗುಣ ಪ್ರಧಾನವಾಗಿರುತ್ತದೆಯೋ ಆ ಪ್ರಕಾರವಾಗಿ ಆ ಮನುಷ್ಯನ ಪ್ರಕೃತಿಯನ್ನು ನಿರ್ಧರಿಸಲಾಗುತ್ತದೆ. ಈ ಪ್ರಕೃತಿಯ ಜ್ಞಾನ ಆರೋಗ್ಯವನ್ನು ಕಾಪಾಡಲು, ರೋಗ ಬಾರದಂತೆ ಮಾಡಲು ಮತ್ತು ವಿವಿಧ ರೋಗಗಳಲ್ಲಿ ಯಾವ ತರಹದ ಪಥ್ಯ–ಅಪಥ್ಯ ಅನುಸರಿಸಬೇಕು ಎಂದು ತಿಳಿದುಕೊಳ್ಳಲು ಅತ್ಯವಶ್ಯಕ. ಇಂಥಹ ಅದ್ಭುತ ಪ್ರಕೃತಿಯ ಜ್ಞಾನ ಆಯುರ್ವೇದದಲ್ಲಿ ಮಾತ್ರ ಇದೆ.

ಈ ಕುರಿತು ಎಲ್ಲ ವಿವರ ನೀಡುತ್ತಾ ಡಾ. ಭೀಮಭಟ್ಟರವರು ವಾತಪ್ರಧಾನ ಪ್ರಕೃತಿ, ಪಿತ್ತ ಪ್ರಧಾನ ಪ್ರಕೃತಿ ಮತ್ತು ಕಫಪ್ರಧಾನ ಪ್ರಕೃತಿಯ ವ್ಯಕ್ತಿಗಳನ್ನು ಹೇಗೆ ಗುರುತಿಸಬಹುದು ಎಂದು ತಿಳಿಸಿದರು. ಅವರವರ ಪ್ರಕೃತಿಯ ಅನುಸಾರವಾಗಿಯೇ ಪ್ರತಿಯೊಬ್ಬರೂ ತಮ್ಮ ಆಹಾರ ಮತ್ತು ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು. ಯಾವ ಯಾವ ಹಣ್ಣು–ತರಕಾರಿ–ಧಾನ್ಯಗಳು–ಬೇಳೆಕಾಳುಗಳು ಯಾವ ಯಾವ ಪ್ರಕೃತಿಗೆ ಒಳ್ಳೆಯದು ಅಥವಾ ಕೆಟ್ಟದು ಎಂದು ತಿಳಿದುಕೊಂಡು ಜೀವನ ನಡೆಸಿದರೆ ಆರೋಗ್ಯದಿಂದ ದೀರ್ಘಕಾಲ ಬಾಳಬಹುದು ಎಂದರು. ಅ

***ಅಭಿಮತ ವರದಿ***




# ಹೊಸ ಸರಕಾರದಿಂದ ದೆಹಲಿ ಕನ್ನಡಿಗರ ನಿರೀಕ್ಷೆ ಕುರಿತು ಸಂಘದಲ್ಲಿ ಚರ್ಚೆ

**ಕನ್ನಡದ ಶ್ರೇಷ್ಠ ಕವಿಗಳಾದ ಗೋಪಾಲಕೃಷ್ಣ ಅಡಿಗರು, ದ.ರಾ. ಬೇಂದ್ರೆ, ಕುವೆಂಪು, ನಿಸಾರ್ ಅಹಮದ್ ಮೊದಲಾದವರ ಹಾಡುಗಳನ್ನು ಇತರ ಭಾಷೆಗಳಿಗೆ ಅನುವಾದಿಸಿ, ಕನ್ನಡದ ಸಾಹಿತ್ಯ ಕನ್ನಡೇತರರಿಗೆ ಪರಿಚಯಿಸುವಂತಹ ಕೆಲಸವನ್ನು ನಮ್ಮ ಸರಕಾರ ಮಾಡಬೇಕಾಗಿದೆ. ಅದೇ ರೀತಿ ಒಳ್ಳೆಯ ನಾಟಕಗಳನ್ನು ಅನುವಾದಿಸಿ ಇತರ ಭಾಷಿಗರಿಗೆ ತೋರಿಸುವಂತಾದರೆ ಆಗ ಕನ್ನಡದ ಕಲಾವಿದರು ಉತ್ತರ ಭಾರತಕ್ಕೆ ಬರುವ ಹಾಗೆ ಆಗುತ್ತದೆ ಈ ನಿಟ್ಟಿನಲ್ಲಿ ಕೆಲಸಗಳು ಆಗಬೇಕು ಎಂದರು.**

*ವಸಂತ ಶೆಟ್ಟಿ ಬೆಳ್ಳಾರೆ*

ಹೊಸ ಸರಕಾರದಿಂದ ದೆಹಲಿ ಕನ್ನಡಿಗರ ನಿರೀಕ್ಷೆ ಎನ್ನುವ ಒಂದು ಚರ್ಚೆಯನ್ನು ಕರ್ನಾಟಕದಲ್ಲಿ ಹೊಸ ಸರಕಾರ ಅಸ್ತಿತ್ವಕ್ಕೆ ಬಂದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಜೂನ್ 24, 2018ರಂದು ಹಮ್ಮಿಕೊಳ್ಳಲಾಗಿತ್ತು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಚರ್ಚೆಯ ವಿಷಯವನ್ನು ಸ್ಥೂಲವಾಗಿ ತಿಳಿಸುತ್ತಾ ತಮಗಿರುವ ನಿರೀಕ್ಷೆಯನ್ನು ತಿಳಿಸಿದರು. ಮುಖ್ಯಮಂತ್ರಿ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಕನ್ನಡದ ಬಗ್ಗೆ ಕೆಲಸ ಮಾಡುತ್ತಾರೆ ಎಂಬ ವಿಶ್ವಾಸವಿದೆ ಎಂದರು. ಅವರು ಹಿಂದೆ ಮಾಡಿದ ಕೆಲಸಗಳು, ಅವರ ಮಾತುಗಳು, ಅವರ ವಿಚಾರಗಳು ಕನ್ನಡದ ಪರವಾಗಿದೆ. ಹೊರನಾಡ ಕನ್ನಡಿಗರ ವಿಚಾರಗಳಿಗೆ ಸ್ಪಂದಿಸುತ್ತಾರೆ ಎಂಬ ವಿಶ್ವಾಸ ನಮಗಿದೆ. ಕಾರ್ಯಕಾರಿ ಸಮಿತಿಯವರು ಇತ್ತೀಚೆಗೆ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದಾಗ ನಾನು ನಿಮ್ಮ ಜೊತೆಗಿದ್ದೇನೆ ಎಂಬ ಧೈರ್ಯದ ಮಾತನ್ನು ನೀಡಿದ್ದಾರೆ ಎಂದರು. ಶ್ರೀಮತಿ ಡಾ. ಜಯಮಾಲಾ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿರುವುದು ಸಂತಸ ತಂದಿದೆ ಹಾಗೂ ಬೆಂಗಳೂರಿನ ಅವರ ನಿವಾಸದಲ್ಲಿ ಭೇಟಿಯಾಗಿ ಅಭಿನಂದಿಸಿದ ಸಂದರ್ಭದಲ್ಲಿ ಈ ಸರಕಾರದಿಂದ ದೆಹಲಿ ಕರ್ನಾಟಕ ಸಂಘಕ್ಕೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಮತ್ತು ದೆಹಲಿಯಲ್ಲಿ ನಾವು ಮಾಡಬೇಕಾದ ಕನ್ನಡದ ಕೆಲಸಗಳಿಗೆ ಸಾಧ್ಯವಾದ ಎಲ್ಲ ಸಹಕಾರಗಳನ್ನು ನೀಡುವ ಭರವಸೆಯನ್ನು ನೀಡಿದ್ದಾರೆ ಎಂದು ತಿಳಿಸಿದರು. ಕನ್ನಡ ಸಾಹಿತ್ಯ, ನೃತ್ಯ, ಜಾನಪದ, ನಾಟಕ ಎಲ್ಲವನ್ನು ಕನ್ನಡೇತರರಿಗೆ ಪರಿಚಯಿಸುವಂತಹ ಕೆಲಸವನ್ನು ಮಾಡಬೇಕಾಗಿದೆ, ಅದಕ್ಕೆ ಸಂಘವೂ ಸ್ಪಂದಿಸಬೇಕು, ಸರಕಾರವೂ ಸ್ಪಂದಿಸಬೇಕು. ರಮ್ಯ ವಶಿಷ್ಠ ಅವರನ್ನು ಕರೆಸುವ ಮೂಲಕ ಸಂಘದಿಂದ ಒಂದು ಪ್ರಯತ್ನವನ್ನು ಮಾಡಿದ್ದೇವೆ. ಕನ್ನಡದ ಶ್ರೇಷ್ಠ ಕವಿಗಳಾದ  ಗೋಪಾಲಕೃಷ್ಣ ಅಡಿಗರು, ದ.ರಾ. ಬೇಂದ್ರೆ, ಕುವೆಂಪು, ನಿಸಾರ್ ಅಹಮದ್ ಮೊದಲಾದವರ ಹಾಡುಗಳನ್ನು ಇತರ ಭಾಷೆಗಳಿಗೆ ಅನುವಾದಿಸಿ, ಕನ್ನಡದ ಸಾಹಿತ್ಯ ಕನ್ನಡೇತರರಿಗೆ ಪರಿಚಯಿಸುವಂತಹ ಕೆಲಸವನ್ನು ನಮ್ಮ ಸರಕಾರ ಮಾಡಬೇಕಾಗಿದೆ. ಅದೇ ರೀತಿ ಒಳ್ಳೆಯ ನಾಟಕಗಳನ್ನು ಅನುವಾದಿಸಿ ಇತರ ಭಾಷಿಗರಿಗೆ ತೋರಿಸುವಂತಾದರೆ ಆಗ ಕನ್ನಡದ ಕಲಾವಿದರು ಉತ್ತರ ಭಾರತಕ್ಕೆ ಬರುವ ಹಾಗೆ ಆಗುತ್ತದೆ ಈ ನಿಟ್ಟಿನಲ್ಲಿ ಕೆಲಸಗಳು ಆಗಬೇಕು ಎಂದರು.

ದೆಹಲಿಯಲ್ಲಿರುವ ವಾರ್ತಾ ಇಲಾಖೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ವಾರ್ತಾ ಇಲಾಖೆ ಒಟ್ಟಾಗಿ ಗಟ್ಟಿಗೊಳಿಸಬೇಕಾದ ಅಗತ್ಯವಿದೆ. ಅದಕ್ಕೆ ಸರಿಯಾದ ಕಚೇರಿ ಸಿಬ್ಬಂದಿಗಳನ್ನಿಟ್ಟು, ಕರ್ನಾಟಕವನ್ನು ಪ್ರತಿನಿಧಿಸುವ ಕೆಲಸವನ್ನು ಇಲ್ಲಿಯ ಸ್ಥಳೀಯ ಸಂಘ ಸಂಸ್ಥೆಗಳನ್ನು ಸೇರಿಸಿಕೊಂಡು ಮಾಡುವಂತಹ ಕೆಲಸ ಆಗಬೇಕಾಗಿದೆ ಎಂದರು. ಊಟ ಮತ್ತು ತಿಂಡಿಗಳಿಗೆ ದೆಹಲಿಯಲ್ಲಿರುವ ಆಂಧ್ರ ಭವನ ಹೆಸರುವಾಸಿ.  ಹಾಗೆಯೇ ನಮ್ಮ ಮೂರು ಕರ್ನಾಟಕ ಭವನದಲ್ಲಿ ಒಂದು ಕರ್ನಾಟಕ ಭವನದಲ್ಲಿ ಊಟ ಮತ್ತು ತಿಂಡಿ ಸಾರ್ವಜನಿಕರಿಗೆ ಸಿಗುವಂತಹ ವ್ಯವಸ್ಥೆ ಆಗಬೇಕು. ಈ ಕುರಿತು ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರಿಗೆ ಸಂಘದಿಂದ ವಿನಂತಿ ಮಾಡಲಾಗಿತ್ತು. ಅದು ಕಾರ್ಯಗತವಾಗಬೇಕು. ಇದರ ಹೊರತಾಗಿ ಕನ್ನಡ ಚಲನಚಿತ್ರ ಪ್ರದರ್ಶನ, ಕರ್ನಾಟಕದ ಕರಕುಶಲ ವಸ್ತುಗಳ ಪ್ರದರ್ಶನ ದೆಹಲಿಯ ಬೇರೆ ಬೇರೆ ಕಡೆಗಳಲ್ಲಿ

ನಡೆಯಬೇಕು.

ಕರ್ನಾಟಕದಿಂದ ಬರುವ ಐ.ಎ.ಎಸ್. ವಿದ್ಯಾರ್ಥಿಗಳಿಗೆ, ಇತರ ಪರೀಕ್ಷೆಗಳಿಗೆ ಹಾಜರಾಗಲು ಬರುವ ವಿದ್ಯಾರ್ಥಿಗಳಿಗೆ, ಆಟೋಟ ಸ್ಪರ್ಧೆಗಳಿಗೆ ಬರುವ, ಮುಖ್ಯವಾಗಿ ವಿದ್ಯಾರ್ಥಿನಿಯರಿಗೆ ವಸತಿಗಾಗಿ ಉಚಿತ ವಸತಿ ಗೃಹ (ಹಾಸ್ಟೇಲ್) ದೆಹಲಿಯಲ್ಲಿ ಆಗಬೇಕು, ಮುಖ್ಯವಾಗಿ ಕರ್ನಾಟಕದ ಗ್ರಾಮೀಣ ಪ್ರದೇಶಗಳಿಂದ ಬರುವವರಿಗೆ ಇದರ ಅಗತ್ಯತೆ ಬಹಳ ಇದೆ. ಸರಕಾರ ಇದರ ಕುರಿತು ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು.

ಕರ್ನಾಟಕವನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸುವ ನಿಟ್ಟಿನಲ್ಲಿ ರಾಣಿ ಅಬ್ಬಕ್ಕ ಕಾರ್ಯಕ್ರಮವನ್ನು ಮಂಗಳೂರು ಜಿಲ್ಲಾಡಳಿತ ಸಹಯೋಗದೊಂದಿಗೆ ಇತ್ತೀಚೆಗೆ ಹಮ್ಮಿಕೊಂಡಿದ್ದನ್ನು ತಿಳಿಸುತ್ತಾ ದೇಶದ ಪ್ರಪ್ರಥಮ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕನಿಗೆ ರಾಷ್ಟ್ರಮಟ್ಟದಲ್ಲಿ ಮನ್ನಣೆ ಸಿಗಲಿಲ್ಲ, ರಾಣಿ ಅಬ್ಬಕ್ಕನ ಬಗ್ಗೆ ಕಿರು ಹೊತ್ತಿಗೆಯನ್ನು ತರುವ ಕೆಲಸ ಪ್ರಗತಿಯಲ್ಲಿದೆ, ಈ ಕಿರು ಹೊತ್ತಿಗೆಯನ್ನು ಮಹಿಳಾ ಸಂಸದರಿಗೆ ನೀಡುವುದರಿಂದ ಅವರು ಸಂಸತ್ತಿನಲ್ಲಿ ದನಿಯನ್ನು ಎತ್ತಲು ಸಹಕಾರಿಯಾಗುವುದು ಮತ್ತು ರಾಜ್ಯ ಸರಕಾರ ಕೂಡ ಒತ್ತಡವನ್ನು ತರಬೇಕು ಎಂದು ಅಭಿಪ್ರಾಯಪಟ್ಟರು. ದೆಹಲಿಯಲ್ಲಿ ನಡೆದ ರಾಣಿ ಅಬ್ಬಕ್ಕ ಉತ್ಸವಕ್ಕೆ ಮಂಗಳೂರು ಜಿಲ್ಲಾಡಳಿತವು ರೂ. 12 ಲಕ್ಷ ನೀಡಿ ಸಂಪೂರ್ಣ ಖರ್ಚು ಭರಿಸಿರುವುದಾಗಿ ತಿಳಿಸಿದರು.

ಈಗ ರಾಜ್ಯಸಭೆಗೆ ಕರ್ನಾಟಕದ ಶ್ರೇಷ್ಠ ಬರಹಗಾರ ಹಾಗೂ ಸಾಹಿತಿ ಶ್ರೀ ಎಲ್. ಹನುಮಂತಯ್ಯನವರು ಮುಂದಿನ ಆರು ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ. ಸಂಘದೊಂದಿಗೆ ಅವರ ಸಂಬಂಧ ಬಹಳ ಚೆನ್ನಾಗಿ ಇದೆ. ಹಾಗಾಗಿ ಈ ಸಂದರ್ಭದಲ್ಲಿ ಅವರ ಜೊತೆಗೂಡಿ ರಾಷ್ಟ್ರಮಟ್ಟದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಒಂದು ದೊಡ್ಡ ಮಟ್ಟದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದು, ರಾಜ್ಯ ಸರಕಾರ ಕೂಡ ಸ್ಪಂದಿಸಬೇಕು, ಎಂದು ಶ್ರೀ ಬೆಳ್ಳಾರೆ ಅವರು ನುಡಿದರು.

ಶ್ರೀ ಚೆನ್ನು ಎಸ್. ಮಠದ ಅವರು ಮಾತನಾಡಿ ರಾಣಿ ಅಬ್ಬಕ್ಕನ ಕುರಿತಾಗಿ ಎಲ್ಲ ಭಾಷೆಗಳಲ್ಲಿ ಸಾಕ್ಷ್ಯಚಿತ್ರವನ್ನು ಮಾಡಬೇಕು ಎನ್ನುವ ಸಲಹೆಯನ್ನು ನೀಡಿದರು. ಕರ್ನಾಟಕವನ್ನು ದೆಹಲಿಯವರಿಗೆ ಬಿಂಬಿಸುವ ಕರ್ನಾಟಕ ಪರ್ವ – ಸಾಂಸ್ಕೃತಿಕ ಕಾರ್ಯಕ್ರಮದ ಆಯೋಜನೆ ಆಗಬೇಕು ಎಂದು ಶ್ರೀ ರವಿಕುಮಾರ್ ತಿಳಿಸಿದರು. ಕರ್ನಾಟಕದ ಆಹಾರ ಹಾಗೂ ಇನ್ನಿತರು ವಸ್ತುಗಳ ಸಿಗುವಂತಹ ಮಳಿಗೆ ಆಗಬೇಕು ಎನ್ನುವ ಸಲಹೆ ಬಂದಿತು.

ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ಧನ್ಯವಾದ ಸಲ್ಲಿಸಿದರು. ಅ

**ಅಭಿಮತ ವರದಿ**



# ನಾಗರಾಜಪ್ಪ ಅವರಿಗೆ ಬೀಳ್ಕೊಡುಗೆ

ವೃತ್ತಿಯಿಂದ ನಿವೃತ್ತಿಗೊಂಡು ತಾಯ್ನಾಡಿಗೆ ತೆರಳುತ್ತಿರುವ ಸಂಘದ ಆಜೀವ ಸದಸ್ಯ ಶ್ರೀ ನಾಗರಾಜಪ್ಪ ಅವರನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಜೂನ್ 24, 2018ರಂದು ಅಭಿನಂದಿಸಲಾಯಿತು. ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡುತ್ತ ಅವರು ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್‌ನಲ್ಲಿ ವೃತ್ತಿ ಮಾಡಲು 1992ರಲ್ಲಿ ಬಂದಿರುವುದನ್ನು ಸ್ಮರಿಸಿದರು. "ದೆಹಲಿ ಕರ್ನಾಟಕ ಸಂಘವು ಆಗ ಆಶ್ರಯ ನೀಡಿತು. ಸಂಘದ ಸಾಹಿತ್ಯಿಕ, ಮತ್ತು ನಾಟಕ ಕಾರ್ಯಕ್ರಮಗಳಲ್ಲಿ ಪ್ರೇಕ್ಷಕನಾಗಿ ಭಾಗವಹಿಸುತ್ತಿದ್ದೆ. ನಾನು ನೀನಾಸಂ ನಲ್ಲಿ ನಾಲ್ಕು ವರ್ಷ ಸುಬ್ಬಣ್ಣ ಅವರ ಗರಡಿಯಲ್ಲಿ ಪಾಠ ಮಾಡಿದ್ದೇನೆ. ಮಂಜುನಾಥ ಬೆಳಕೆರೆ, ಮಂಡ್ಯ ರಮೇಶ್, ಭಾಗೀರಥಿಯವರು ನನ್ನ ವಿದ್ಯಾರ್ಥಿಗಳು. ಹೆಗ್ಗೋಡು, ಹಾಸನ ಮತ್ತು ಗುಲ್ಬರ್ಗಾದಲ್ಲಿ ಆಕಾಶವಾಣಿಯಲ್ಲಿ ಕೆಲಸ ಮಾಡಿದೆ. ಆಗ ನ್ಯಾಷನಲ್ ಬುಕ್ ಟ್ರಸ್ಟ್‌ನಲ್ಲಿ ಅಧ್ಯಕ್ಷರಾಗಿದ್ದ ಡಾ. ಯು.ಆರ್. ಅನಂತಮೂರ್ತಿಯವರ ಒತ್ತಾಯದ ಮೇಲೆ ನ್ಯಾಷನಲ್ ಬುಕ್ ಟ್ರಸ್ಟ್‌ನಲ್ಲಿ ಸೇರಿಕೊಂಡೆ. ಸಂಘವು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಾ ಇದೆ, ಕನ್ನಡಪರ ಚಟುವಟಿಕೆಗಳನ್ನು ನಡೆಸುತ್ತಾ ಇದೆ" ಎಂದು ತಮ್ಮ ಕೃತಜ್ಞತೆ ಸಲ್ಲಿಸಿದರು.

ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ ನಾಟಕ ಕ್ಷೇತ್ರದ ದಿಗ್ಗಜರಾದ ಮಂಜುನಾಥ ಬೆಳಕೆರೆ, ಮಂಡ್ಯ ರಮೇಶ್, ಭಾಗೀರಥಿಯವರಂತವರಿಗೆ ತರಬೇತಿ ಕೊಟ್ಟಂತ ಒಬ್ಬ ವ್ಯಕ್ತಿ ದೆಹಲಿಯಲ್ಲಿದ್ದು ಅವರನ್ನು ಸಂಘ ಬಳಸಿಕೊಳ್ಳಲಿಕ್ಕೆ ಆಗಲಿಲ್ಲ ಎಂದು ಈ ಸಂದರ್ಭದಲ್ಲಿ ಬೇಸರ ವ್ಯಕ್ತಪಡಿಸಿದರು. ದೆಹಲಿ ಕರ್ನಾಟಕ ಸಂಘದ ವತಿಯಿಂದ ಶ್ರೀ ನಾಗರಾಜಪ್ಪ ಅವರಿಗೆ ಆತ್ಮೀಯ ಬೀಳ್ಕೊಡುಗೆಯನ್ನು ನೀಡಲಾಯಿತು. ಅ

**ಅಭಿಮತ ವರದಿ**

# ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಅಧ್ಯಕ್ಷರಾಗಿ ರಂಗಮಣಿ ರಾವ್



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಇತ್ತೀಚೆಗೆ ನಡೆದ ಸಭೆಯಲ್ಲಿ 2018–20ನೇ ಸಾಲಿಗಾಗಿ ಪದಾಧಿಕಾರಿಗಳ ಆಯ್ಕೆ ನಡೆದಿದ್ದು ಶ್ರೀಮತಿ ರಂಗಮಣಿ ರಾವ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

**ಉಪಾಧ್ಯಕ್ಷರು** : ಶ್ರೀಮತಿ ಸರೋಜ ಮಾಧವ, **ಕಾರ್ಯದರ್ಶಿ** : ಶ್ರೀಮತಿ ರಾಜೇಶ್ವರಿ ಕಲ್ಲೂರು, **ಖಜಾಂಚಿ** : ಶ್ರೀಮತಿ ಲೀಲಾವತಿ ಗುರುಪ್ರಸಾದ್, **ಜಂಟಿ ಕಾರ್ಯದರ್ಶಿ** : ಶ್ರೀಮತಿ ಶೋಭಾ ಗೌಡ ಅ



# ಸಂಘದ ಆರ್ಟ್ ಗ್ಯಾಲರಿಯಲ್ಲಿ ಜಿ. ಆರ್. ಮಲ್ಲಾಪೂರ ಅವರ ಚಿತ್ರಕಲಾ ಪ್ರದರ್ಶನ







ಕರ್ನಾಟಕದ ಹುಬ್ಬಳ್ಳಿಯಿಂದ ಬಂದಿರುವ ಕನ್ನಡಿಗ ಕಲಾವಿದರಾದ ಜಿ. ಆರ್. ಮಲ್ಲಾಪೂರ ಅವರ ಚಿತ್ರಕಲಾ ಪ್ರದರ್ಶನವು ಇದೇ ಜೂನ್ 29ರಂದು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಸುವರ್ಣ ನ್ಯೂಸ್‌ನ ಮುಖ್ಯಸ್ಥರಾದ ಶ್ರೀ ಪ್ರಶಾಂತ ನಾತು ಹಾಗೂ ದೆಹಲಿಯ ಇನ್ನೋರ್ವ ರಾಷ್ಟ್ರೀಯ ಚಿತ್ರಕಲಾವಿದರಾದ ಶ್ರೀ ಸುಧೀರ್ ಫಡ್ನೀಸ್ ಅವರ ಉಪಸ್ಥಿತಿಯಲ್ಲಿ ಉದ್ಘಾಟನೆಗೊಂಡಿತು.

ಶ್ರೀ ಪ್ರಶಾಂತ ನಾತು ಅವರು ಉದ್ಘಾಟನಾ ಭಾಷಣದಲ್ಲಿ ಕಲಾವಿದರಾದ ಜಿ. ಆರ್. ಮಲ್ಲಾಪೂರ ಅವರ ಎಲ್ಲ ಕಲಾಕೃತಿಗಳಲ್ಲಿ ಹುಬ್ಬಳ್ಳಿ ನಗರದ ಪ್ರಮುಖ ಹಾಗೂ ಆಕರ್ಷಣೀಯ ಸ್ಥಳಗಳನ್ನೆಲ್ಲಾ ಅತ್ಯಂತ ಸಹಜತೆ ಹಾಗೂ ನೈಜತೆಯಿಂದ ಚಿತ್ರಿಸಿದ ರೀತಿ ತನಗೆ ತನ್ನ ತವರಿನಲ್ಲಿ ಕಳೆದ ಬಾಲ್ಯದ ಸವಿನೆನಪುಗಳನ್ನು ಮರುಕಳಿಸಿ ಮನಸ್ಸಿಗೆ ಅತ್ಯಂತ ಮುದ ನೀಡಿದವು ಎಂದರು.

ಇದೇ ರೀತಿ ಕರ್ನಾಟಕದ ಇತರೆಡೆಯಿಂದ ಎಲ್ಲ ಕಲಾವಿದರೂ ರಾಷ್ಟ್ರ ರಾಜಧಾನಿಗೆ ಬಂದು ತಮ್ಮ ಕಲಾಪ್ರದರ್ಶನ ನೀಡಬೇಕು ಎಂದು ಹೇಳಿದರು. ಕಲಾವಿದ ಜಿ. ಆರ್. ಮಲ್ಲಾಪೂರ ಅವರ ಕಲಾ ಪ್ರದರ್ಶನ ಯಶಸ್ವಿಯಾಗಲಿ ಹಾಗೂ ದೆಹಲಿಯ ಹೆಚ್ಚು ಜನರು ಬಂದು ವೀಕ್ಷಿಸುವಂತಾಗಲಿ ಎಂದು ಹಾರೈಸಿದರು.

ಕಲಾ ಪ್ರದರ್ಶನಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಸುಧೀರ ಫಡ್ನೀಸ್ ಅವರು ಮಾತನಾಡಿ ಕನ್ನಡಿಗರಾದ ಕಲಾವಿದ ಶ್ರೀ ಜಿ. ಆರ್. ಮಲ್ಲಾಪೂರ ಅವರು ಜಲವರ್ಣ ಮಾಧ್ಯಮದ ಕಲಾಕೃತಿಗಳಲ್ಲಿ ವರ್ಣಗಳು ತುಂಬಾ ತಾಜಾತನದಿಂದ ಕೂಡಿವೆ. ನೋಡುಗರಿಗೆ ಆಕರ್ಷಣೆ ಹಾಗೂ ಖುಷಿಯನ್ನು ನೀಡುತ್ತವೆ. ಇಂತಹ ಕಲಾವಿದರನ್ನು ಗುರುತಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ದೆಹಲಿಯಲ್ಲಿ ಕಲಾಪ್ರದರ್ಶನ ಮಾಡಲು ಧನಸಹಾಯ ಮಾಡಿದ್ದಕ್ಕೆ ಅವರಿಗೆ ಧನ್ಯವಾದಗಳನ್ನು ತಿಳಿಸಿದರು. ಅವರ ಕಲಾಕೃತಿಗಳಲ್ಲಿ ಹುಬ್ಬಳ್ಳಿಯಲ್ಲಿ ಇಂತಹ ಪ್ರಮುಖ ಸ್ಥಳಗಳಿವೆ ಎಂದು ದೆಹಲಿ ಜನರಿಗೆ ಪರಿಚಯಿಸಲಾಗಿದೆ. ದೆಹಲಿಯ ವರೆಗೆ ಬಂದ ಅವರು ವಿದೇಶದಲ್ಲಿಯೂ ನಮ್ಮ ಕರ್ನಾಟಕವನ್ನು ಪರಿಚಯಿಸುವಂತಾಗಲಿ ಎಂದು ಹಾರೈಸಿದರು. ಈ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ಕಲಾವಿದರಾದ ಶ್ರೀ ಚಂದ್ರು ಕೆ. ಯಡ್ರಾಮಿ ಹಾಗೂ ಶ್ರೀ ಜಗದೀಶ ಗದಗಿನ ಇನ್ನಿತರರು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***



# ಸೌಹಾರ್ದತೆಗೊಂದು ನಿದರ್ಶನ-ದೆಹಲಿಯ ಎರಡು ಕನ್ನಡ ಸಂಸ್ಥೆಗಳ ಭಾವನಾತ್ಮಕ ಮಿಲನ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸರ್ವ ಸದಸ್ಯರ ಸಭೆ ಅಂದ್ರೆ ಸಾಮಾನ್ಯವಾಗಿ ಕಾವೇರುವ, ಬಿಸಿ ಬಿಸಿ ಚರ್ಚೆಗಳು ನಡೆಯುವ, ಸದಸ್ಯರು ತಮ್ಮ ಅನಿಸಿಕೆಗಳನ್ನು ಖಾರವಾಗಿಯೇ ಮಂಡಿಸುವ ಮಾತಿನ ಸಮರಾಂಗಣವಾಗುತ್ತಾ, ಕೊನೆಯಲ್ಲಿ ತಿಳಿಯಾಗುವ ಒಂದು ಅನಿವಾರ್ಯ ಪರಂಪರೆಯಾಗಿತ್ತು. ಕಳೆದ ಹತ್ತಾರು ವರ್ಷಗಳಿಂದ ಇಂತಹ ಸನ್ನಿವೇಶ ಬರುತ್ತಿದ್ದದ್ದನ್ನು ನೋಡಿಯೇ ಹಿರಿಯರನೇಕರು ಹಿಂದುಳಿಯುತ್ತಿದ್ದರು. ಆದರೆ ಈ ಬಾರಿ ದೆಹಲಿಯ ಬಿಸಿಲಿಗೆ ಕಾವೇರಿದ ಜೂನ್ ತಿಂಗಳ ಮಟ-ಮಟ ಮಧ್ಯಾಹ್ನದ ತನಕ ನಡೆದ ಸರ್ವಸದಸ್ಯರ ಸಭೆ ಐತಿಹಾಸಿಕವಾಗಿತ್ತು. ದೆಹಲಿಯ ಎರಡು ಹಿರಿಯ ಕನ್ನಡ ಸಂಸ್ಥೆಗಳ ಭಾವನಾತ್ಮಕ ಐಕ್ಯತೆಗೊಂದು ವೇದಿಕೆಯಾಗಿತ್ತು.

ದೆಹಲಿಯ ಕರ್ನಾಟಕ ಸಂಘದ ಸಮೀಪ ಇರುವಂತಹ ಮೆಟ್ರೋ ಸ್ಟೇಷನ್ನಿಗೆ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ಇರಿಸುವಲ್ಲಿ ಸಫಲರಾದ ಹಾಗೂ ಕನ್ನಡ ಶಾಲೆಗೆ ಸ್ಮಾರ್ಟ್ ಕ್ಲಾಸ್‌ಗಳಿಗಾಗಿ ಸಹಾಯ ಹಸ್ತ ಚಾಚಿದ ದೆಹಲಿ ಕರ್ನಾಟಕ ಸಂಘಕ್ಕೆ ಕೃತಜ್ಞತೆಯನ್ನು ಸಲ್ಲಿಸುವುದರೊಂದಿಗೆ ಸ್ವಾಗತ. ಆ ಸಹಾಯದಿಂದ ಶಾಲೆಗೆ ಹಾಗೂ ಕನ್ನಡಕ್ಕಾಗಬಹುದಾದ ಪರೋಕ್ಷ ಲಾಭಗಳ ಎಣಿಕೆಯೊಂದಿಗೆ ಪ್ರಾರಂಭವಾದ ಸ್ವಾಗತದಲ್ಲಿ ಕನ್ನಡದ ಹಿರಿಯ ಚೇತನಗಳಾಗಿದ್ದ ಐ. ರಾಮಮೋಹನ ರಾವ್, ಎಚ್.ಎಸ್. ಕುಲಕರ್ಣಿ ಮುಂತಾದ ಹಿರಿಯರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಆ ನಂತರ ಸರ್ವಸದಸ್ಯರ ಸಭೆಯಲ್ಲಿ ಶಿಕ್ಷಣ ಸಂಸ್ಥೆಯ ಪ್ರಗತಿಯ ಬಗ್ಗೆ, ಸಮಸ್ಯೆಗಳ ಬಗ್ಗೆ ಮುಕ್ತವಾದ ಚರ್ಚೆ ನಡೆಯಿತು.

ಅರ್ಥಪೂರ್ಣ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು, ದೆಹಲಿ ಕರ್ನಾಟಕ ಸಂಘ ಮತ್ತೆ ಶಿಕ್ಷಣ ಸಂಸ್ಥೆ ಜೊತೆಯಾಗಿ ಕನ್ನಡಿಗರು ಹೆಚ್ಚಾಗಿ ವಾಸ ಮಾಡುವಂತಹ ದೆಹಲಿಯ ಹೊರವಲಯದಲ್ಲಿ ಶಿಕ್ಷಣಕ್ಕೆ ಹಾಗೂ ಸಾಂಸ್ಕೃತಿಕ ಸೇವೆಗಳನ್ನು ಒದಗಿಸುವ ಬಗ್ಗೆ ಚರ್ಚಿಸಿ ಮುಂಬರುವ ದಿನಗಳಲ್ಲಿ ಅಂತಹುದೊಂದು ಚಟುವಟಿಕೆಗಾಗಿ ತಿಳುವಳಿಕೆಯ ಜ್ಞಾಪನಾ ಪತ್ರವನ್ನು ಸಿದ್ಧಪಡಿಸುವ ಕುರಿತು ಹೇಳಿದಾಗ ಕರತಾಡನದ ಮೂಲಕ ಸದಸ್ಯರೆಲ್ಲರು ಸಮ್ಮತಿಸಿದರು.

ಗುರ್‌ಗಾಂವ್‌ನ ಕನ್ನಡ ಸಂಘಕ್ಕೆ ಶಿಕ್ಷಣ ಸಂಸ್ಥೆಯಿಂದ ಕನ್ನಡ ಅಧ್ಯಾಪಕರ ವೇತನಕ್ಕಾಗಿ ವರ್ಷಕ್ಕೆ 1,20,000/-ರೂಪಾಯಿಗಳನ್ನು ನೀಡುತ್ತಿದ್ದುದನ್ನು ಶ್ಲಾಘಿಸಿದ ಸದಸ್ಯರು ಇದು ಯಾವುದೇ ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿಗೆ ಮಾತ್ರ ಸೀಮಿತವಾಗದೆ ನಿರಂತರವಾಗಿ ಲಭಿಸಬೇಕೆಂದು ಕೋರಿದರು. ದೆಹಲಿಯ ಶಿಕ್ಷಣ ಸಂಸ್ಥೆಯೂ ಪುಟ್ಟ ಪುಟ್ಟ ಹೆಜ್ಜೆಗಳನ್ನು ಇಡುತ್ತಲೇ ಬೃಹತ್ತಾಗಿ ಬೆಳೆದುದನ್ನು ನೆನಪಿಸಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಗುರ್‌ಗಾಂವ್‌ನಲ್ಲಿ ಕನ್ನಡ ಶಾಲೆಯ ಸ್ಥಾಪನೆಗೆ ಇದು ನಾಂದಿಯಾಗಿದೆ. ಆದ್ದರಿಂದ ಇದನ್ನು ಎಲ್ಲರೂ ಪ್ರೋತ್ಸಾಹಿಸಬೇಕಾಗಿದೆ ಎಂದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು, ಗುರ್‌ಗಾಂವಿನ ಕನ್ನಡ ಸಂಘ ನಡೆಸುವ ಶಾಲೆಗೆ ಬೇಕಾಗುವ ಇನ್ನಿತರ ಆರ್ಥಿಕ ಸಹಾಯವನ್ನು ಸಂಘದ ವತಿಯಿಂದ ಒದಗಿಸಿ ಕೊಡುವ ಭರವಸೆ ನೀಡುವುದರೊಂದಿಗೆ ಕನ್ನಡ ಶಿಕ್ಷಣ ಸಂಸ್ಥೆ ಮತ್ತೆ ದೆಹಲಿ ಕರ್ನಾಟಕ ಸಂಘದ ಮೈತ್ರಿಗೊಂದು ಭದ್ರ ಬುನಾದಿಯನ್ನು ಹಾಕುವಲ್ಲಿ ನೆರವಾದುದು ಇತಿಹಾಸದ ಪುಟಗಳಲ್ಲಿ ದಾಖಲಾಗಬೇಕಾದ ಅಂಶ.

ಹಲವಾರು ವರ್ಷಗಳ ಕಾಲ ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳಾಗಿದ್ದ ಶ್ರೀ ಈಶ್ವರ ಮಡಿವಾಳರವರು, ಶಿಕ್ಷಣದ ಅರ್ಥ ವ್ಯವಸ್ಥೆಯ ಒಂದೊಂದು ಅಂಶಗಳ ಕುರಿತೂ ತಮ್ಮ ಸಲಹೆಗಳನ್ನು ನೀಡಿದರಲ್ಲದೆ ಶಿಕ್ಷಣ ಸಂಸ್ಥೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ಸಲಹೆಗಳನ್ನು ನೀಡಿದರು.

ಶಿಕ್ಷಣ ಸಂಸ್ಥೆಯ ಸಂವಿಧಾನ ತಿದ್ದುಪಡಿಯ ಬಗ್ಗೆ ಕಾರ್ಯದರ್ಶಿಯವರ ವರದಿಯ ಮುನ್ನುಡಿಯಲ್ಲಿಯೇ ಅಧ್ಯಕ್ಷರು ಪ್ರಸ್ತಾಪಿಸಿದ್ದರಿಂದ ಸರ್ವ ಸದಸ್ಯರ ಸಭೆಯೂ ಅದನ್ನು ಮನಗಂಡು, ಒಮ್ಮತದಿಂದ ಸಂವಿಧಾನ ತಿದ್ದುಪಡಿ ಮಾಡಲು ಸಮ್ಮತಿಸಿದಲ್ಲದೆ ಈ ಸಮಿತಿಯನ್ನು ರಚಿಸಲು ಬೋರ್ಡಿಗೆ ಅಧಿಕಾರವನ್ನು ನೀಡಿ, ಶೀಘ್ರವೇ ಕಾರ್ಯಪ್ರವೃತ್ತರಾಗುವಂತೆ ಸೂಚಿಸಿತು.

ಕನ್ನಡ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವದ ಸ್ಮರಣ ಸಂಚಿಕೆಯನ್ನು ತರಲು ಒತ್ತಾಯಿಸಿದ ಡಾ. ಎಂ.ಎಸ್. ಶಶಿಕುಮಾರ್ ಅದಕ್ಕಾಗಿ ಆರ್ಥಿಕ ನೆರವನ್ನು ನೀಡುವ ಭರವಸೆ ನೀಡಿದರು. ಆರ್ಥಿಕವಾಗಿ ಸದೃಢಗೊಳ್ಳಲು ಸಂಸ್ಥೆ ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಲಾಯಿತು.

ಪ್ರಾಂಶುಪಾಲರು ಮತ್ತು ಉಪಪ್ರಾಂಶುಪಾಲರ ನೇಮಕಾತಿಗೆ ಸಂಬಂಧಿಸಿದಂತೆ, ಶಿಕ್ಷಣ ಇಲಾಖೆಯಿಂದ ಅನುಮೋದನೆ ನೀಡಲು ವಿಳಂಬವಾಗುತ್ತಿದ್ದು, ಸಂಸ್ಥೆ ಪಡುತ್ತಿರುವ ಪಾಡು ಮತ್ತು ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಲಾಯಿತು. ವಿಶಿಷ್ಟ ಮಾನವ ಸಂಪನ್ಮೂಲಗಳನ್ನು ತೊಡಗಿಸಿಕೊಳ್ಳಲು ಸಭೆ ಅನುಮತಿ ನೀಡುವುದರೊಂದಿಗೆ ಹಲವಾರು ಸಕಾರಾತ್ಮಕ ಮತ್ತು ಅಭಿವೃದ್ಧಿ ಸಲಹೆಗಳನ್ನು ಸರ್ವ ಸದಸ್ಯರು ನೀಡಿದ್ದು. ಲೆಕ್ಕ ಪತ್ರಗಳ ಮಂಜೂರಾತಿ, ಕಾರ್ಯದರ್ಶಿಗಳ ವರದಿಯ ಅನುಮೋದನೆ, ಬಜೆಟ್ ಮಂಡನೆ ಹಾಗೂ ಅನುಮೋದನೆ, ಲೆಕ್ಕ ಪತ್ರ-ಪರಿಶೋಧಕರ ನೇಮಕಾತಿ ಮುಂತಾದ ಎಲ್ಲಾ ಕಾರ್ಯಸೂಚಿಗಳು ಚರ್ಚೆ ಹಾಗೂ ಒಮ್ಮತದ ಅನೊಮೋದನೆಗೆ ಒಳಪಟ್ಟು ಸರ್ವಸದಸ್ಯರ ಸಭೆ ಅತ್ಯಂತ ಸೌಹಾರ್ದಯುತವಾಗಿ ಮುಗಿಯುವುದರೊಂದಿಗೆ ದೆಹಲಿಯಲ್ಲಿ ಕನ್ನಡ ಚಟುವಟಿಕೆಗಳನ್ನು ಹೊಸ ದೃಷ್ಟಿಕೋನದಿಂದ ವೀಕ್ಷಿಸಲು ಸಾಧ್ಯವಾಗಿರುವುದಕ್ಕೆ ಉಪಸ್ಥಿತರಿದ್ದ ಸರ್ವಸದಸ್ಯರು ಮಾತ್ರವಲ್ಲ, ಎಲ್ಲಾ ಸದಸ್ಯರು ಅಭಿನಂದನಾರ್ಹರು. ಅ

***ಸರವು ಕೃಷ್ಣ ಭಟ್***



# ಹಳಗನ್ನಡ ಸಾಹಿತ್ಯ- ಮರು ಸೃಷ್ಟಿಯ ಸವಾಲುಗಳು

**ಕಂತು 1**

ಕನ್ನಡ ಸಾಹಿತ್ಯ ಪರಿಷತ್ತು ಶ್ರವಣಬೆಳಗೊಳದಲ್ಲಿ ಭಗವಾನ್ ಬಾಹುಬಲಿಯ ಮಹಾಮಸ್ತಕಾಭಿಷೇಕ ಮಹೋತ್ಸವದ ಹಿನ್ನೆಲೆಯಲ್ಲಿ ಪ್ರಥಮ ಬಾರಿಗೆ ಅಖಿಲ ಭಾರತ ಹಳೆಗನ್ನಡ ಸಾಹಿತ್ಯ ಸಮ್ಮೇಳನವನ್ನು ಇದೇ ಜೂನ್ 24, 25 ಹಾಗೂ 26 ರಂದು ಚಾವುಂಡರಾಯ ಸಭಾಮಂಟಪದಲ್ಲಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಹಾಗೂ ಡಾ.ಷ. ಶೆಟ್ಟರ್ ಅವರ ಅಧ್ಯಕ್ಷತೆಯಲ್ಲಿ ವಿವಿಧ ಗೋಷ್ಠಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಸಿತು. ಹಳಗನ್ನಡ ಸಾಹಿತ್ಯ ಮತ್ತು ಆಧುನಿಕ ಅನುಸಂಧಾನ ಎಂಬ ವಿಚಾರಸಂಕಿರಣದಲ್ಲಿ ನಡೆದ ಮೊದಲ ಗೋಷ್ಠಿಯಲ್ಲಿ ಹಳಗನ್ನಡ ಸಾಹಿತ್ಯ– ಮರು ಸೃಷ್ಟಿಯ ಸವಾಲುಗಳು ಎಂಬ ವಿಚಾರದಲ್ಲಿ ಹಿರಿಯ ವಿದ್ವಾಂಸ **ಡಾ. ಪುರುಷೋತ್ತಮ ಬಿಳಿಮಲೆ**ಯವರು ಮಾಡಿದ ಭಾಷಣದ ವಿಸ್ತೃತ ಪ್ರಬಂಧವನ್ನು ಅಭಿಮತದ ಓದುಗರಿಗೆ ಮೂರು ಕಂತುಗಳಲ್ಲಿ ನೀಡಲಿದ್ದೇವೆ. ಆರಂಭದಲ್ಲಿ ಅವರು ಸಾಹಿತ್ಯ ಚರಿತ್ರೆಗಳನ್ನು ಬರೆಯುವ ಮುನ್ನ, ಅಥವಾ ಗ್ರಂಥ ಸಂಪಾದನಾ ಶಾಸ್ತ್ರ ಬೆಳೆಯುವ ಮುನ್ನ ನಮ್ಮ ಹಳಗನ್ನಡ ಸಾಹಿತ್ಯ ಜನರನ್ನು ಹೇಗೆ ತಲುಪುತ್ತಿತ್ತು ಎಂದು ವಿಶ್ಲೇಷಿಸುತ್ತಿದ್ದಾರೆ.

*ಸಂ.*

ನೇರವಾಗಿ ವಿಷಯಕ್ಕೆ ಪ್ರವೇಶ ಮಾಡುವ ಮುನ್ನ ಹಳಗನ್ನಡ ಸಾಹಿತ್ಯವು ಚಾರಿತ್ರಿಕವಾಗಿ ಮರುಸೃಷ್ಟಿ ಹೊಂದುತ್ತಾ ಬಂದಿರುದನ್ನು ಗಮನಿಸುವುದು ಉಚಿತ ಎಂದು ಭಾವಿಸುತ್ತೇನೆ.

ವಿದ್ಯಾರ್ಥಿ ದಿಸೆಯಿಂದಲೂ ಹಳಗನ್ನಡ ಸಾಹಿತ್ಯಕ್ಕೆ ನಮ್ಮ ಪ್ರವೇಶವಾದದ್ದು ನಾವು ಓದಿದ ಸಾಹಿತ್ಯ ಚರಿತ್ರೆಗಳ ಮೂಲಕ. ಆನಂತರ ಅಧ್ಯಾಪಕನಾಗಿದ್ದ ಸಮಯದಲ್ಲಿ ನಾನು ಬಗೆ ಬಗೆಯ ಸಾಹಿತ್ಯ ಚರಿತ್ರೆಗಳನ್ನು ಓದಬೇಕಾಯಿತು. ಅವುಗಳಲ್ಲಿ ಕಾದಂಬರಿಯ ಹಾಗೆ ಓದಿಸಿಕೊಂಡು ಹೋಗುವ ರಂ. ಶ್ರೀ. ಮುಗಳಿ ಅವರ ಸಾಹಿತ್ಯ ಚರಿತ್ರೆ ನಮಗೆಲ್ಲಾ ಇಷ್ಟವಾಗಿತ್ತು. ಇದರ ಜೊತೆಗೆ ಕನ್ನಡದ ಹಳಮೆಯ ಬಗ್ಗೆ ಬಹಳ ಉತ್ಸಾಹದಿಂದ ಬರೆಯುವ ಮಂಜೇಶ್ವರ ಗೋವಿಂದ ಪೈಗಳು, ಅನೇಕ ವರ್ಷಗಳ ಶ್ರಮ ಸಾಧ್ಯ ದುಡಿತದ ಪರಿಣಾಮವಾಗಿ ಸಿದ್ಧಗೊಂಡ ಕನ್ನಡ ಕವಿಚರಿತ್ರೆಯ ಮೂರು ಬೃಹತ್ ಸಂಪುಟಗಳ ಮೂಲಕ ಸಾವಿರಾರು ಕವಿಗಳ ಬಗೆಗೆ ಮೊದಲ ಬಾರಿಗೆ ಅತ್ಯದ್ಭುತ ಮಾಹಿತಿ ನೀಡಿ, ಕನ್ನಡದ ಬಗ್ಗೆ ನಾವೆಲ್ಲ ಹೆಮ್ಮೆ ಪಟ್ಟುಕೊಳ್ಳುವ ಹಾಗೆ ಮಾಡಿದ ಆರ್ ನರಸಿಂಹಾಚಾರ್ ಅವರು, ಬಿ ಎಂ ಶ್ರೀಕಂಠಯ್ಯ ಅವರ ಆಸಕ್ತಿಯಿಂದ ಪ್ರಕಟವಾದ ಕನ್ನಡ ಕೈಪಿಡಿ, ಸುಲಲಿತ ಓದಿಗೆ ಹೆಸರುವಾಸಿಯಾದ ಟಿ ಎಸ್ ವೆಂಕಣ್ಣಯ್ಯ ಅವರ ಕನ್ನಡ ಸಾಹಿತ್ಯ ಚರಿತ್ರೆ, ಪರೀಕ್ಷೆಯಲ್ಲಿ ಉತ್ತರ ಬರೆಯಲು ಬಹಳ ಸಹಾಯ ಮಾಡುತ್ತಿದ್ದ ತ. ಸು. ಶಾಮರಾಯ ಅವರ ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ವಿದ್ವಾಂಸ ಎಂ. ಮರಿಯಪ್ಪ ಭಟ್ ಅವರ ಪ್ರಾಚೀನ ಕನ್ನಡ ಸಾಹಿತ್ಯ, ಮಾರ್ಕ್ಸ್‌ವಾದೀ ಚಿಂತನಾ ಚೌಕಟ್ಟಿನಲ್ಲಿ ಸಿ. ವೀರಣ್ಣ ಅವರು ಬರೆದ ಕನ್ನಡ ಸಾಹಿತ್ಯ: ಚಾರಿತ್ರಿಕ ಬೆಳವಣಿಗೆ, ಸಂಪುಟ–1, ಮೊದಲಾದ ಅನೇಕ ಬಗೆಯ ಸಾಹಿತ್ಯ ಚರಿತ್ರೆಗಳು ಹಳಗನ್ನಡದ ಬಗೆಗಣ ನಮ್ಮ ತಿಳುವಳಿಕೆಯನ್ನು ವಿಸ್ತರಿಸಿ ಕಟ್ಟಿದುವು. ಆನಂತರದ ದಿನಗಳಲ್ಲಿ ಕೆಲವು ಸಂಸ್ಥೆಗಳೂ ಸಾಹಿತ್ಯ ಚರಿತ್ರೆಯನ್ನು ಬರೆಯಲು ಆರಂಭಿಸಿದುವು. ಇದರಲ್ಲಿ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯಗಳು ಸಿದ್ಧಪಡಿಸಿದ ಸಾಹಿತ್ಯ ಚರಿತ್ರೆಯ ಸಂಪುಟಗಳು ಬೃಹತ್ತಾಗಿದ್ದು ಹಳಗನ್ನಡದ ಬಗೆಗಣ ನಮ್ಮ ಅನೇಕ ಅನುಮಾನಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾದುವು. ಅದರಲ್ಲೂ ಬೆಂಗಳೂರು ವಿಶ್ವವಿದ್ಯಾಲಯವು ಪ್ರಕಟಿಸಿದ ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಮಾಲಿಕೆಯ ಹತ್ತು ಸಂಪುಟಗಳು ವಿಶೇಷವಾಗಿ ನಮ್ಮ ಕವಿಗಳನ್ನು ಹಾಗೂ ಅವರ ರಚನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ವಿಶಿಷ್ಟ ಪ್ರಯತ್ನವಾಗಿತ್ತು. ಇದಾದ ಆನಂತರ ದೊಡ್ಡ ಮಟ್ಟದಲ್ಲಿ ಸಾಹಿತ್ಯ ಚರಿತ್ರೆ ಪ್ರಕಟವಾಗಿದ್ದು ನನ್ನ ಗಮನಕ್ಕೆ ಬಂದಿಲ್ಲ.

ಈ ಸಾಹಿತ್ಯ ಚರಿತ್ರೆಗಳ ಜೊತೆಗೆ 20ನೇ ಶತಮಾನದುದ್ದಕ್ಕೂ ಅನೇಕ ಹಳಗನ್ನಡ ಕವಿಗಳ ಪಠ್ಯಗಳನ್ನು ಸಂಪಾದಿಸಿ, ಅದಕ್ಕೊಂದು ವಿಸ್ತಾರವಾದ ಪ್ರಸ್ತಾವನೆ ಬರೆದು, ಪ್ರಕಟಿಸುವ ಕೆಲಸಗಳು ದೊಡ್ಡ ಮಟ್ಟದಲ್ಲಿ ನಡೆದುವು. ಬಿ.ಎಲ್. ರೈಸ್, ಎಸ್.ಜಿ. ನರಸಿಂಹಾಚಾರ್, ಡಿ.ಎಲ್. ನರಸಿಂಹಾಚಾರ್, ಬೆಳ್ಳಾವೆ ವೆಂಕಟನಾರಾಯಣಪ್ಪ, ಕೆ.ಜಿ. ಕುಂದಣಗಾರ, ಟಿ.ಎಸ್. ವೆಂಕಣಯ್ಯ, ಮಂಜೇಶ್ವರ ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಸೇಡಿಯಾಪು ಕೃಷ್ಣ ಭಟ್, ಎಲ್. ಬಸವರಾಜು, ಫ. ಗು. ಹಳಕಟ್ಟಿ, ಆರ್.ಸಿ. ಹಿರೇಮಠ, ಎಂ. ಚಿದಾನಂದ ಮೂರ್ತಿ, ಎಂ.ಎಂ. ಕಲಬುರ್ಗಿ, ಸಾ.ಶಿ. ಮರುಳಯ್ಯ, ಎಸ್. ವಿದ್ಯಾಶಂಕರ, ಆರ್.ವೈ. ಧಾರವಾಡಕರ್, ವೃಷಭೇಂದ್ರ ಸ್ವಾಮಿ, ವರದರಾಜ ರಾವ್, ಶ್ರೀನಿವಾಸ ಹಾವನೂರು, ಹಂಪ ನಾಗರಾಜಯ್ಯ, ಹಾ.ಮಾ. ನಾಯಕ, ಟಿ.ವಿ. ವೆಂಕಟಾಚಲ ಶಾಸ್ತ್ರಿ, ಜಿ. ವೆಂಕಟಸುಬ್ಬಯ್ಯ, ಜಿ.ಎಸ್. ಶಿವರುದ್ರಪ್ಪ, ಮೊದಲಾದ ಘನ ವಿದ್ವಾಂಸರು ಹಳಗನ್ನಡ ಪಠ್ಯಗಳ ಮೇಲೆ ಬರೆದ ಲೇಖನಗಳೂ ನಮ್ಮನ್ನೆಲ್ಲ ಗಾಢವಾಗಿ ಪ್ರಭಾವಿಸಿದುವು.

ಈ ಎಲ್ಲಾ ಪ್ರಯತ್ನಗಳೂ ಅಂದಂದಿನ ಅಗತ್ಯಗಳಿಗೆ ತಕ್ಕಂತೆ ಸಿದ್ಧವಾದ ಸಂಪುಟಗಳು, ಪ್ರಸ್ತಾವನೆಗಳು ಹಾಗೂ ಲೇಖನಗಳು. ಸ್ಥೂಲವಾಗಿ ಇವು ಪರಿಚಯಾತ್ಮಕ, ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕವಾಗಿದ್ದುವು. ಕವಿಯ ಮನೆತನ, ಗುರು ಪರಂಪರೆ, ಕಾಲ ನಿರ್ಣಯ, ದೇಶ ಪರಿಚಯ, ಆಶ್ರಯದಾತನ ಬಗ್ಗೆ ಮಾಹಿತಿ, ಕವಿಯ ವ್ಯಕ್ತಿತ್ವ, ಕವಿಕಾವ್ಯ ಪ್ರಶಂಸೆ, ಮತ್ತು ಅವನ ಕೃತಿಗಳ ಸ್ಥೂಲ ಪರಿಚಯ– ಇವಿಷ್ಟು ಸಾಮಾನ್ಯವಾಗಿ ಇಲ್ಲಿ ಕಂಡು ಬರುವ ವಿಚಾರಗಳು. ಜೊತೆಗೆ ಹಲ್ಮಿಡಿ ಶಾಸನದಿಂದ ಆರಂಭ ಮಾಡಿ 16ನೇ ಶತಮಾನದ ಯಕ್ಷಗಾನ ಕವಿಗಳ ವರೆಗೆ ಒಟ್ಟಾರೆಯಾಗಿ ಬರೆವಾಗ ಆ ವಿಸ್ತಾರವಾದ ಕಾಲಘಟ್ಟವನ್ನು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡಗಳೆಂದು ಭಾಷಿಕ ಆಧಾರದಲ್ಲಿ, ಪಂಪಪೂರ್ವಯುಗ, ಪಂಪ ಯುಗ, ಬಸವ ಯುಗ, ಕುಮಾರವ್ಯಾಸ ಯುಗ, ದಾಸಯುಗ ವೆಂದು ಕವಿಕೇಂದ್ರಿತವಾಗಿ ಅಥವಾ ಚಂಪೂ ಯುಗ, ವಚನಯುಗ, ಷಟ್ಪದಿ ಯುಗ ಎಂದು ಸಾಹಿತ್ಯ ಪ್ರಕಾರಗಳ ಆಧಾರದಲ್ಲಿ ವಿಭಜಿಸಿ ವಿವರಿಸಿರುವುದುಂಟು.

ಇವೆಲ್ಲವನ್ನೂ ಒಟ್ಟಾರೆಯಾಗಿ ಗಮನಿಸಿದಾಗ ನಮಗೆ ಹಳಗನ್ನಡದ ಕವಿಗಳು ಪರಿಚಯವಾದ ರೀತಿಯಲ್ಲಿ ಒಂದು ಬಗೆಯ ಏಕತಾನತೆ ಇದೆ ಎಂದು ಈಗ ಅನ್ನಿಸುತ್ತಿದೆ. ಪ್ರಕಟವಾಗಿರುವ ಸಾಹಿತ್ಯ ಚರಿತ್ರೆಯ ಸಂಪುಟಗಳು ಒಂದೇ ಬಗೆಯಲ್ಲಿ ರಚಿತವಾಗಿವೆ ಎಂದು ಈಗ ತೋರುತ್ತಿದೆ. ಈಗಾಗಲೇ ನಾನು ಹೇಳಿರುವಂತೆ, ಅವು ಕವಿಯ ಕಾಲ, ದೇಶ, ಕುಟುಂಬದ ವಿವರಗಳನ್ನು ನೀಡುವುದರ ಜೊತೆಗೆ ಕವಿಯ ಕೃತಿಗಳ ಬಗೆಗೆ ಸಂಕ್ಷಿಪ್ತವಾಗಿಯೋ ಇಲ್ಲ ಸವಿವರವಾಗಿಯೋ ವಿವರ ನೀಡುತ್ತವೆ. ಬಹುಮಟ್ಟಿಗೆ ವಡ್ಡಾರಾಧನೆಯಿಂದ ಆರಂಭವಾಗುವ ಕನ್ನಡ ಸಾಹಿತ್ಯ ಚರಿತ್ರೆಯು ಮೈಸೂರು ಅರಸರ ಕಾಲದಲ್ಲಿ ರಚಿತವಾದ ಕೃತಿಗಳನ್ನು ವಿವರಿಸುವದರೊಂದಿಗೆ ಮುಕ್ತಾಯವಾಗುತ್ತದೆ. ಹೊಸಗನ್ನಡ ಸಾಹಿತ್ಯ ಚರಿತ್ರೆಯನ್ನು ಬರೆಯುವವರು ನವೋದಯದಿಂದ ಆರಂಭಿಸಿ ದಲಿತ–ಬಂಡಾಯ ಸಾಹಿತ್ಯಗಳನ್ನು ಪರಿಚಯಿಸುವದರೊಂದಿಗೆ ಅದನ್ನು ಕೊನೆಗೊಳಿಸುತ್ತಾರೆ. ಅಂದರೆ ಬಹುಮಟ್ಟಿಗೆ ನಮ್ಮ ಸಾಹಿತ್ಯ ಚರಿತ್ರೆಗಳು ಕೃತಿಯೊಂದನ್ನು ಅಂತಿಮವೆಂದು ಪರಿಭಾವಿಸಿಕೊಂಡು ರಚಿತವಾಗಿವೆ. ಈ ವಿಮರ್ಶೆಯು ಪಠ್ಯವೊಂದರ ಅಂತಸ್ಥ ಗುಣಗಳನ್ನು ಸೂಕ್ಷ್ಮವಾಗಿ

ತೆರೆದಿಡುತ್ತದೆ. ಆದರೆ ನಿರ್ದಿಷ್ಟ ಪಠ್ಯವೊಂದು ಕಾಲ ಕಾಲಕ್ಕೆ ಬದಲಾಗುತ್ತಾ, ಹೊಸ ರೂಪ ಧರಿಸಿ ಬೆಳೆಯುತ್ತಾ, ಸುಸ್ಥಿರವಾಗಿ ಮುಂದುವರೆದುಕೊಂಡು ಬರುವ ಕ್ರಮವನ್ನು ಉಪೇಕ್ಷಿಸುತ್ತದೆ. ಇದನ್ನು ಚಾರಿತ್ರಿಕವಾಗಿ ಅರ್ಥಮಾಡಿಕೊಂಡರೆ ಮಾತ್ರ ಆಧುನಿಕ ಕಾಲದಲ್ಲಿ ಇವುಗಳ ಮರು ಸೃಷ್ಟಿ ಹೇಗೆ ಸಾಧ್ಯ ಎಂಬ ಕುರಿತು ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಾದೀತು.

ನಾವೀಗ ನಮಗೆ ಲಭ್ಯವಾಗಿರುವ ಸಾಹಿತ್ಯ ಚರಿತ್ರೆಗಳು ಹಾಗೂ ವಿದ್ವಾಂಸರಿಂದ ಸಂಪಾದಿತವಾದ ಮೂಲ ಪಠ್ಯಗಳ ಮೂಲಕ ಹಳಗನ್ನಡ ಸಾಹಿತ್ಯವನ್ನು ಓದುತ್ತೇವೆ, ಚರ್ಚಿಸುತ್ತೇವೆ ಮತ್ತು ನೆನಪಿಟ್ಟುಕೊಳ್ಳುತ್ತೇವೆ. ಹಾಗಾದರೆ ಸಾಹಿತ್ಯ ಚರಿತ್ರೆಗಳನ್ನು ಬರೆಯುವ ಮುನ್ನ, ಅಥವಾ ಗ್ರಂಥ ಸಂಪಾದನಾ ಶಾಸ್ತ್ರ ಬೆಳೆಯುವ ಮುನ್ನ ನಮ್ಮ ಹಳಗನ್ನಡ ಸಾಹಿತ್ಯ ಜನರನ್ನು ಹೇಗೆ ತಲುಪುತ್ತಿತ್ತು? ಅಂದರೆ ಆಧುನಿಕ ಪೂರ್ವ ಯುಗದಲ್ಲಿ ಪಂಪ, ಪೊನ್ನ, ರನ್ನ, ನಾಗಚಂದ್ರ, ನಾಗವರ್ಮ ಮೊದಲಾದವರ ರಚನೆಗಳು ಉಳಿದು ಬಂದ ಬಗೆ ಹೇಗೆ ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ ನಮಗೆ ನಮ್ಮ ಹಳಗನ್ನಡ ಸಾಹಿತ್ಯ ಪರಂಪರೆಯ ಬಗೆಗೆ ಹೊಸ ಮಾತುಗಳನ್ನು ಹೇಳಲು ಸಾಧ್ಯವಾದೀತು ಎಂದು ನಾನು ಭಾವಿಸುತ್ತೇನೆ. ಈ ಅರ್ಥದಲ್ಲಿ ಅದು ಕಾಲ, ವ್ಯಕ್ತಿ, ಸಮುದಾಯಗಳು ಮತ್ತು ಪ್ರದೇಶಗಳು ನಿರ್ದಿಷ್ಟ ಪಠ್ಯವೊಂದನ್ನು ಮರು ರೂಪಿಸಿಕೊಂಡು ಬಂದ ರೀತಿಗಳ ಪರಿಶೀಲನೆಯೂ ಹೌದು.

ಕೆಲವು ಉದಾಹರಣೆಗಳ ಮೂಲಕ ಮೇಲಿನ ಮಾತನ್ನು ಇನ್ನಷ್ಟು ಸ್ಪಷ್ಟಪಡಿಸಬಹುದು.

ಕಾವ್ಯ ಒನಕೆವಾಡಾದ ಪರಿ: 5ನೇ ಶತಮಾನದಿಂದ 10ನೇ ಶತಮಾನದ ಅವಧಿಯನ್ನು ನಾವು ಪೂರ್ವದ ಹಳಗನ್ನಡದ ಕಾಲ ಎಂದು ಗುರುತಿಸುತ್ತೇವೆ. ಈ ಅವಧಿಯಲ್ಲಿ ಅನೇಕ ಉತ್ತಮ ಕೃತಿಗಳು ಕನ್ನಡದಲ್ಲಿ ಸೃಷ್ಟಿಯಾಗಿರುವುದಕ್ಕೆ ಸಾಕಷ್ಟು ಪ್ರಮಾಣಗಳಿದ್ದರೂ ಅಂಥ ಕೃತಿಗಳು ದೊರೆಯದೆ ಏನೂ ಹೇಳುವಂತಿಲ್ಲ. ಕ್ರಿಸ್ತ ಶಕ 840ರಲ್ಲಿ ರಚಿತವಾಗಿದೆ ಎನ್ನಲಾದ ಶ್ರೀ ವಿಜಯನ ಕವಿರಾಜ ಮಾರ್ಗನಲ್ಲಿ ಈ ಕೆಳಗಿನ ಗದ್ಯ ಲೇಖಕರ ಹೆಸರು ದೊರಕುತ್ತದೆ–


*ವಿಮಳೋದಯ ನಾಗಾರ್ಜುನ*
*ಸಮೇತ ಜಯಬಂಧು ದುರ್ವಿನೀತಾದಿಗಳೀ*
*ಕ್ರಮದೊಳ್ ನೆಗೞ್ದಿ*
*ಗದ್ಯಾಶ್ರಮಪದಗುರುತಾಪ್ರತೀತಿಯಂ*
*ಕೆಯ್ಕೊಂಡರ್*

ಅದೇ ಕೃತಿಯಲ್ಲಿ ಈ ಕೆಳಗಿನ ಪದ್ಯ ಲೇಖಕರ ಹೆಸರು ದೊರಕುತ್ತದೆ–

*ಪರಮ ಶ್ರೀವಿಜಯಕವೀ*
*ಶ್ವರ ಪಂಡಿತಚಂದ್ರ ಲೋಕಪಾಲಾದಿಗಳಾ*
*ನಿರತಿಶಯವಸ್ತುವಿಸ್ತರ*
*ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ*

ಇವರಲ್ಲಿ ಕೆಲವರಾದರೂ ಕನ್ನಡದಲ್ಲಿಯೇ ಬರೆದವರು ಎಂಬುದನ್ನು ಎಂ.ಎಂ. ಕಲಬುರ್ಗಿ ಅಂತಹ ಮೇಧಾವಿ ಸಂಶೋಧಕರು ಬಲವಾಗಿ ಸ್ಥಾಪಿಸಿದ್ದಾರೆ. ಈ ಹೆಸರುಗಳಲ್ಲದೆ ತಂಬೂಲಾಚಾರ್ಯ, ಶ್ಯಾಮಕುಂದಾಚಾರ್ಯ, ಸೈಗೊಟ್ಟ ಶಿವಮಾರ, ಅಸಗ, ಗುಣನಂದಿ, ಒಂದನೇ ಗುಣವರ್ಮ ಮೊದಲಾದವರ ಹೆಸರುಗಳು ಕನ್ನಡ ಸಾಹಿತ್ಯ ಪರಂಪರೆಯುದ್ದಕ್ಕೂ ಕಂಡು ಬಂದರೂ ಅವರ ಕೃತಿಗಳು ದೊರೆತಿಲ್ಲ. ಆದರೆ ಜೈನ ಲೇಖಕರಾದ ಇವರ ಬರೆಹಗಳು ಸುಮಾರು 16ನೇ ಶತಮಾನ ಅಂದರೆ ಮೂಡಬಿದಿರೆಯ ರತ್ನಾಕರ ವರ್ಣಿಯವರೆಗೆ ಅನೇಕರ ಮೇಲೆ ಗಾಢ ಪರಿಣಾಮ ಬೀರದೇ ಇರಲು ಸಾಧ್ಯವಿಲ್ಲ. ಕನ್ನಡಿಗರ ಹೆಮ್ಮೆಗೆ ಕಾರಣನಾದ ರಾಷ್ಟ್ರಕೂಟ ಅರಸ ಅಮೋಘವರ್ಷ ನೃಪತುಂಗನ ಗುರುವಾಗಿದ್ದ ಜಿನಸೇನಾಚಾರ್ಯರ ಪೂರ್ವ ಪುರಾಣ ಮತ್ತು ಮಹಾಪುರಾಣಗಳೇ ಅನೇಕ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳಿಗೆ ಆಕರಗಳಾದುವು. ಈ ಎರಡೂ ಜಿನ ಪುರಾಣಗಳನ್ನು ಪಂಪನಿಂದ ರತ್ನಾಕರವರ್ಣಿ ವರೆಗೆ ಕನ್ನಡದ ಕವಿಗಳು ಹೇಗೆ ಮರುಸೃಷ್ಟಿ ಮಾಡಿಕೊಂಡರೆಂಬುದನ್ನು ನಾವಿನ್ನೂ ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಒಂದು ಅಂದಾಜಿನ ಪ್ರಕಾರ ಸುಮಾರು 450 ಕವಿಗಳು 520ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಮೇಲೆ ಉಲ್ಲೇಖಿಸಲಾದ ಪ್ರಾಚೀನ ಕನ್ನಡ ಕವಿಗಳಲ್ಲಿ ಗಜಾಷ್ಟಕವನ್ನು ಬರೆದ ಸೈಗೊಟ್ಟ ಶಿವಮಾರನನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು. ಶಿವಮಾರನು ಪಶ್ಚಿಮ ಗಂಗ ವಂಶಕ್ಕೆ ಸೇರಿದ ಅರಸ. ಇತಿಹಾಸ ತಜ್ಞರ ಪ್ರಕಾರ ಈತನ ಕಾಲ ಸುಮಾರು ಕ್ರಿಸ್ತ ಶಕ 830. ವ್ಯಾಕರಣ, ನೀತಿ ಶಾಸ್ತ್ರ, ಬಿಲ್ವಿದ್ಯೆ, ಕಾವ್ಯ, ಅಶ್ವ ಶಾಸ್ತ್ರ, ಮೊದಲಾದ ವಿದ್ಯೆಗಳಲ್ಲಿ ಪರಿಣಿತನಾದ ಈತನ ಗಜಾಷ್ಟಕ ಕೃತಿಯು 'ಒನಕೆವಾಡು' ಆಗಿ ಜನಪ್ರಿಯವಾಗಿತ್ತೆಂದು ಶಿವಮೊಗ್ಗ ಜಿಲ್ಲೆಯ ಹುಮಚದ ಪಂಚಬಸ್ತಿ ಶಾಸನ ಕೊಂಡಾಡುತ್ತದೆ. ಈ ಒನಕೆವಾಡು ಎಂಬುದು ಕುಟ್ಟುವ ಪದಗಳಾಗಿ ತ್ರಿಪದಿ ಛಂದಸ್ಸಿನಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ಒಂದು ಜನಪದ ಪ್ರಕಾರ. ಬಾದಾಮಿ ಶಾಸನದ ಕಾಲದಿಂದಲೂ (ಕ್ರಿಸ್ತ ಶಕ 750) ಕನ್ನಡಿಗರಿಗೆ ಆಪ್ತವಾದ ಈ ಛಂದೋ ಪ್ರಕಾರದಲ್ಲಿ ಗಜಾಷ್ಟಕವು ಮರುಸೃಷ್ಟಿ ಹೊಂದಿತೆಂಬ ವಿಚಾರವು ಬಹಳ ಮುಖ್ಯವಾದುದು. ಮರು ಸೃಷ್ಟಿ ಆಗಿಲ್ಲ ಎಂದು ವಾದಿಸುವುದಾದರೂ, ಗಜಾಷ್ಟಕವು ಒನಕೆವಾಡಾಗಿ ಪರಿವರ್ತನೆ ಹೊಂದಿದ ರೀತಿ ಮಾತ್ರ ಹಳಗನ್ನಡ ಪಠ್ಯಗಳು ಉಳಿದು ಬಂದ ಬಗೆಯ ಕುರಿತು ನಮಗೆ ಹೊಸ ಒಳನೋಟಗಳನ್ನು ನೀಡುತ್ತದೆ. ಆ ಕಾಲದ ಪಠ್ಯಗಳು ಕಾಲದ ಬದಲಾವಣೆಯೊಟ್ಟಿಗೆ ಬದುಕುಳಿಯಲು ಹೊಸ ಹಾದಿಗಳನ್ನು ಕಂಡು ಹುಡುಕಿಕೊಳ್ಳುತ್ತಿದ್ದುವು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.





**ಅಭಿಜಾತ ಪರಂಪರೆಯ ಅತ್ಯುತ್ತಮ ಮರು ಸೃಷ್ಟಿಗಳು**

ಪೂರ್ವದ ಹಳಗನ್ನಡದ ಕಾಲಘಟ್ಟವನ್ನು ದಾಟಿ ಮುಂದೆ ಬಂದರೆ ನಮಗೆ ಸಾಹಿತ್ಯದ ವಸ್ತು, ತಂತ್ರ ಮತ್ತು ಭಾಷೆಯ ದೃಷ್ಟಿಯಿಂದ ಬಹಳ ಶ್ರೀಮಂತವಾದ ಹಳಗನ್ನಡದ ಪಠ್ಯಗಳು ದೊರೆಯುತ್ತವೆ. ಈ ಕಾಲಘಟ್ಟದಲ್ಲಿಯೇ ಶ್ರೀವಿಜಯ (ಕ್ರಿಸ್ತ ಶಕ 840), ಶಿವಕೋಟ್ಯಾಚಾರ್ಯ, ಕ್ರಿಸ್ತ ಶಕ 860), ಚಾವುಂಡರಾಯ (ಕ್ರಿಸ್ತ ಶಕ 975), ಪಂಪ (ಕ್ರಿಸ್ತ ಶಕ 950), ಪೊನ್ನ (ಕ್ರಿಸ್ತ ಶಕ 960), ರನ್ನ (ಕ್ರಿಸ್ತ ಶಕ 990) ಒಂದನೆಯ ನಾಗವರ್ಮ (ಕ್ರಿಸ್ತ ಶಕ) ನಾಗಚಂದ್ರ (ಕ್ರಿಸ್ತ ಶಕ 1100) ನಯಸೇನ (ಕ್ರಿಸ್ತ ಶಕ 1100) ಬ್ರಹ್ಮಶಿವ (ಕ್ರಿಸ್ತ ಶಕ 1150), ದುರ್ಗಸಿಂಹ (ಕ್ರಿಸ್ತ ಶಕ 1030) ಚಂದ್ರರಾಜ (ಕ್ರಿಸ್ತ ಶಕ 1040), ಶ್ರೀಧರಾಚಾರ್ಯ (ಕ್ರಿಸ್ತ ಶಕ 1050), ಶಾಂತಿನಾಥ (ಕ್ರಿಸ್ತ ಶಕ 1070), ಕರ್ಣಪಾರ್ಯ (ಕ್ರಿಸ್ತ ಶಕ 1150) ಮೊದಲಾದವರು ಅತ್ಯುತ್ತಮ ಕೃತಿಗಳನ್ನು ರಚಿಸಿದರು.

ಈ ಮಹತ್ವದ ಕಾಲಘಟ್ಟದಲ್ಲಿ ಪ್ರಕಟವಾಗಿರುವ ಮಹಾಭಾರತ ಆಧಾರಿತ ಕನ್ನಡ ಕಾವ್ಯಗಳನ್ನು ಗಮನಿಸೋಣ. ವ್ಯಾಸನ ಭಾರತವನ್ನು ಪಂಪನು ತನ್ನ ಅಸಾಧಾರಣ ಪ್ರತಿಭೆಯಿಂದ 'ವಿಕ್ರಮಾರ್ಜುನ ವಿಜಯಂ' ಆಗಿ ಮರುಸೃಷ್ಟಿಸಿದ.

ಹಾಗೆ ಮರುಸೃಷ್ಟಿಸುವಾಗ ಪಂಪನು ತನ್ನ ಭಾರತ ಹೇಗಿರುತ್ತದೆ ಎಂಬ ಬಗ್ಗೆ ತಾನೇ ಒಂದು ಮುನ್ನುಡಿ ಬರೆದುಕೊಳ್ಳುತ್ತಾನೆ–


*'ಕತೆ ಪಿರಿದಾದೊಡಂ ಕತೆಯ*
*ಮೆಯ್ಗಿಡಲೀಯದೆ*
*ಮುಂ ಸಮಸ್ತಭಾರತಮನಪೂರ್ವಮಾಗಿ*
*ಸಲೆ ಪೇಳ್ದ ಕವೀಶ್ವರರಿಲ್ಲ*
*ವರ್ಣಕಂ ಕತೆಯೊಳಡಂಬಡಂ ಪಡೆಯೆ*
*ಪೇಳ್ವೊಡೆ ಪಂಪನೆ ಪೇಳ್ಗುಂ'.*

ಪಂಪನನ್ನು ಓದಿದವರಿಗೆ ಇದು ಸರಿಯಾಗಿ ಅರ್ಥವಾದೀತು. ಸಂಸ್ಕೃತದಲ್ಲಿದ್ದ ವ್ಯಾಸನ ಮಹಾ ಮಹಾಭಾರತವು ಹೀಗೆ ಕನ್ನಡ ಭಾರತವಾಗಿ, ವಿಕ್ರಮಾರ್ಜುನವಿಜಯವಾಗಿ ಹೊಸ ರೂಪ ಧರಿಸಿ ಬದುಕುಳಿಯಿತು. ವಸಾಹತು ಕಾಲಘಟ್ಟದಲ್ಲಿ ವ್ಯಾಸರು ಬರೆದ ಮಹಾಭಾರತದ ನೂರಾರು ಪಠ್ಯಗಳನ್ನು ಸಂಗ್ರಹಿಸಿ, ಅವುಗಳಿಂದ **'ಒಂದು ಅಧಿಕೃತ'** ಮಹಾಭಾರತವನ್ನು ಸಿದ್ಧಪಡಿಸಿಕೊಡಲು ಬ್ರಿಟಿಷರು ಪ್ರಖ್ಯಾತ ಸಂಸ್ಕೃತ ವಿದ್ವಾಂಸರಾಗಿದ್ದ ಶ್ರೀ ವಿಷ್ಣು ಎಸ್. ಸೂಕ್ತಂಕರ್ ಅವರನ್ನು 1919ರಲ್ಲಿ ಕೇಳಿಕೊಂಡಿದ್ದರು. ಸೂಕ್ತಂಕರ್ ಅವರು ಪಿ.ವಿ. ಕಾಣೆ, ಆರ್ ಡಿ. ಕರಮರ್ಕರ್, ವಿ.ಜಿ. ಪರಾಂಜಪೆ, ವಿಂಟರ್ನೀಟ್ಜ ಮೊದಲಾದ ಸಮರ್ಥ ವಿದ್ವಾಂಸರ ತಂಡದೊಂದಿಗೆ ಸುಮಾರು 15 ವರ್ಷಗಳ ಕಾಲ ದುಡಿದು, ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ವಿವಿಧ ಪ್ರದೇಶಗಳಲ್ಲಿ ಲಭ್ಯವಿದ್ದ ಸುಮಾರು 1150 ಹಸ್ತ ಪ್ರತಿಗಳನ್ನು ಸಂಗ್ರಹಿಸಿದ್ದರು. ಅವೆಲ್ಲವುಗಳನ್ನು ಅಧ್ಯಯನ ಮಾಡಿ 'ಮೂಲಕ್ಕೆ ಹತ್ತಿರ ಅನ್ನಬಹುದಾದ ಪಠ್ಯವೊಂದನ್ನು ಸಿದ್ಧಪಡಿಸಿ, ಅದನ್ನು ಪೂನಾದ ಭಂಡಾರ್ಕ್ಸ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಿಂದ ಪ್ರಕಟಿಸಲಾಯಿತು. (1933). ಹಾಗೆ ಪ್ರಕಟಿಸುವಾಗ ಸೂಕ್ತಂಕರ್ ಅವರು ಬರೆದ ಬಹಳ ಮಹತ್ವದ ವಾಕ್ಯವೊಂದು ಇಂತಿದೆ– "ವ್ಯಾಸರು ಬರೆದ ಮೂಲ ಪಠ್ಯ ಹೇಗಿದ್ದಿರಬಹುದೆಂದು ಸಾಧಿಸುವುದು ಸಾಧ್ಯವಿಲ್ಲದ ಕೆಲಸ, ಈಗ ನಾವು ಸಿದ್ಧಪಡಿಸಿದ್ದು ಮಹಾಭಾರತದ ಇನ್ನೊಂದು ಪಠ್ಯ ಅಷ್ಟೆ'. ಕುತೂಹಲದ ವಿಷಯವೆಂದರೆ, ನಮ್ಮ ದೇಶದಲ್ಲಿ ವಿವಿಧ ಭಾಷೆಗಳು ಮತ್ತು ಸಮುದಾಯಗಳು ಕಾವ್ಯವನ್ನು ತಮಗೆ ಬೇಕಾದಂತೆ ಮತ್ತೆ ಮತ್ತೆ ಬರೆದುಕೊಳ್ಳುತ್ತವೆ ಎಂಬುದನ್ನು ನಾವೀಗ ಮರೆತುಬಿಟ್ಟಿರುವುದು. ತನ್ನ ಕಾಲದ, ಸಮುದಾಯದ, ಪ್ರದೇಶದ ಮತ್ತು ನಿರೂಪಕನ ಅಗತ್ಯಗಳಿಗೆ ಅನುಗುಣವಾಗಿ ಇಲ್ಲಿ ಕಾವ್ಯಗಳನ್ನು ಮತ್ತೆ ಮತ್ತೆ ಬರೆಯಲಾಗುತ್ತದೆ. ಪಂಪನ ಭಾರತವು ಅಂಥದ್ದೊಂದು ಪ್ರಯತ್ನ. ಈ ಮರುಸೃಷ್ಟಿಯಿಂದ ಕನ್ನಡವೂ ಬದುಕಿತು, ಸಂಸ್ಕೃತವೂ ಉಳಿಯಿತು.

ಆದರೆ ಹಳಗನ್ನಡ ಮಹಾಭಾರತ ಸಾಹಿತ್ಯ ಪರಂಪರೆಯು ಅಲ್ಲಿಗೇ ನಿಲ್ಲುವುದಿಲ್ಲ. ಪಂಪನ ವಿಕ್ರಮಾರ್ಜುನ ವಿಜಯದ 13ನೇ ಆಶ್ವಾಸದಿಂದ ಪ್ರೇರಣೆ ಪಡೆದ ಕವಿಚಕ್ರವರ್ತಿ ರನ್ನನು ಅದನ್ನೇ ಒಂದು ಸ್ವತಂತ್ರ ಕಾವ್ಯವನ್ನಾಗಿ ಪರಿವರ್ತಿಸಿ ಸಾಹಸ ಭೀಮ ವಿಜಯಂ ಬರೆದ. ಹಾಗೆ ಬರೆಯುವಾಗ ಪಂಪನಿಗಿಂತ ಭಿನ್ನವಾದ ಒಂದು ಧೋರಣೆಯನ್ನು ತಾನು ಅನುಸರಿಸುವುದಾಗಿ ಹೇಳಿಕೊಂಡ–

*ಒಳಪೊಕ್ಕು ನೋಡೆ*
*ಭಾರತದೊಳಗಣ ಕಥೆಯೆಲ್ಲಂ*
*ಈ ಗದಾಯುದ್ಧದೊಳ್ ಅಂತು ಒಳಗೊಂಡಿತ್ತು*
*ಎನೆ*
*ಸಿಂಹಾವಲೋಕನ ಕ್ರಮದಿನ್*
*ಅರಿಪಿದಂ ಕವಿರತ್ನಂ*

ಪಂಪನ ಒಂದು ಆಶ್ವಾಸವು ಹೀಗೆ ಒಂದು ಕಾವ್ಯವೇ ಆಗಿಬಿಡುವಾಗ ರನ್ನನು ಬೇಕಾದಷ್ಟು ತೆಗೆದುಕೊಳ್ಳುತ್ತಾನೆ, ಕೆಲವನ್ನು ಬಿಡುತ್ತಾನೆ ಮತ್ತು ಕೆಲವನ್ನು ತನಗೆ ಬೇಕಾದಂತೆ ಮಾರ್ಪಡಿಸಿಕೊಳ್ಳುತ್ತಾನೆ. ಈ ಕುರಿತು ಕನ್ನಡದಲ್ಲಿ ಸಾಕಷ್ಟು ವಿಮರ್ಶೆ ಪ್ರಕಟ ಆಗಿರುವುದರಿಂದ ಇಲ್ಲಿ ನಾನದನ್ನು ಇನ್ನಷ್ಟು ವಿಸ್ತರಿಸಲು ಹೋಗುವುದಿಲ್ಲ. ಮರು ಸೃಷ್ಟಿಯ ಕಡೆಗೆ ಓದುಗರ ಗಮನ ಸೆಳೆಯುವುದಷ್ಟೇ ಇಲ್ಲಿನ ಉದ್ದೇಶ.




ಹಳಗನ್ನಡದಲ್ಲಿ ಮಹಾಭಾರತದ ಹಾಗೆ ರಾಮಾಯಣಕ್ಕೆ ಸಂಬಂಧಿಸಿದಂತೆ ಎರಡು ಕಾವ್ಯಗಳು ರಚಿತವಾಗಿವೆ. ಮೊದಲನೆಯದು ಪೊನ್ನನ ಭುವನೈಕ್ಯ ರಾಮಾಭ್ಯದಯ (ಕ್ರಿ. ಶ. ಸು 950), ಹಾಗೂ ಎರಡನೆಯದು ನಾಗಚಂದ್ರನ ರಾಮಚಂದ್ರ ಚರಿತ ಪುರಾಣ (ಕ್ರಿ. ಶ. ಸು 1100). ಈ ಎರಡೂ ಕೃತಿಗಳು ವಿಮಲಸೂರಿ ಮತ್ತು ರವಿಷೇಣರು ಆರಂಭಿಸಿದ ಜೈನ ರಾಮಾಯಣದ ಎರಡು ಪರಂಪರೆಗಳನ್ನು ಕನ್ನಡದಲ್ಲಿ ಪುನರ್‌ಸೃಷ್ಟಿಸಿದರು. ನಾಗಚಂದ್ರನು ಪಂಪನಿಂದ ಆರಂಭವಾದ ಲೌಕಿಕ–ಆಗಮಿಕ ವಿಭಜನೆಯನ್ನು ಕಟ್ಟುನಿಟ್ಟಾಗಿ ಅನುಸರಿಸದೆ ತಾನು ಬರೆದ ರಾಮಾಯಣವನ್ನು ಚರಿತವೂ ಹೌದು, ಪುರಾಣವೂ ಹೌದು ಎಂದು ಘೋಷಿಸಿದ. ಈ ಅರ್ಥದಲ್ಲಿ ಆತನ ರಾಮಾಯಣವು ಆಗಮಿಕ ಕಾವ್ಯಗಳ ಹಾಗೆ ಪೂರ್ತಿ ಪುರಾಣವೂ ಅಲ್ಲ, ಲೌಕಿಕ ಕಾವ್ಯಗಳ ಹಾಗೆ ಪೂರ್ತಿ ವಿಜಯವೂ ಅಲ್ಲ. ಇದು ಇನ್ನೊಂದು ಬಗೆಯ ಪುನರ್ ಸೃಷ್ಟಿಯೇ ಆಗಿದೆ.

ಹಳಗನ್ನಡ ಕಾಲಘಟ್ಟದಲ್ಲಿ ರಚನೆಯಾದ ಮಹಾಭಾರತಗಳಾಗಲೀ, ರಾಮಾಯಣಗಳಾಗಲೀ, ಅಥವಾ ಆಗಮಿಕ ಕಾವ್ಯಗಳೇ ಆಗಲಿ, ಇವೆಲ್ಲವೂ ಪಂಡಿತ ವರ್ಗಕ್ಕೆ ಪ್ರಿಯವಾದ ಕಾವ್ಯಗಳೇ ಆಗಿದ್ದುವು. ಹಳಗನ್ನಡ ಕವಿಗಳೂ ಆಗಮಿಕ ಹಾಗೂ ಲೌಕಿಕ ವಿದ್ಯೆಗಳಲ್ಲಿ ಬಹುವಾದ ಪರಿಶ್ರಮ ಹೊಂದಿದ್ದರು. ಹಿರಿಯ ವಿದ್ವಾಂಸರಾದ ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರು 'ಆದಿ ಪುರಾಣದ ಕಥಾಭಾಗದಲ್ಲಿ ಮಹಾಬಳನೆಂಬುವನ ಬಗೆಗೆ ಹೇಳುತ್ತಾ ಬರೆದಿರುವ ಪರಿಸಮಾಪ್ತ ಸಕಳ ಕಳಾ ವಿಜ್ಞಾನನುಂ ಅಧಿಗತ ಶೇಷಶಾಸ್ತ್ರನುಂ, ಪರಿಣತ ಸಕಳ ಶಸ್ತ್ರನುಮಾಗಿ ಎಂದಿರುವ ಮಾತನ್ನು ಅವನಿಗೇ ಅನ್ವಯಿಸಿದರೂ ಒಪ್ಪುತ್ತದೆ' ಎಂದು ಪಂಪನ ಬಗ್ಗೆ ಹೇಳುತ್ತಾರೆ (ಪಂಪ ಸಂಪುಟ, ಪುಟ 31). ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಇದ್ದ ಜೈನ ಪುರಾಣಗಳು, ಆಗಮಗಳು, ಶಾಸ್ತ್ರಗಳು ಇವನ್ನೆಲ್ಲ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದ ಹಳಗನ್ನಡ ಕವಿಗಳು ಇವುಗಳ ಜೊತೆ ಜೊತೆಗೆ ಸಂಗೀತ, ನೃತ್ಯ, ಚಿತ್ರ, ಶಿಲ್ಪ, ವೈದ್ಯ, ರಾಜನೀತಿ, ಸ್ಮರ ತಂತ್ರ, ಮೊದಲಾದ ವಿದ್ಯೆಗಳನ್ನೂ ಕಲಿತಿದ್ದರು. ಕಾಳಿದಾಸ, ಭಾಸ ಮೊದಲಾದ ಸಂಸ್ಕೃತದ ಮಹಾ ಕವಿಗಳನ್ನೂ ಇವರೆಲ್ಲರೂ ಅಧ್ಯಯನ ಮಾಡಿದ್ದಕ್ಕೆ ಸಾಕಷ್ಟು ಪುರಾವೆಗಳು ಸಿಗುತ್ತವೆ. ಇವುಗಳೆಲ್ಲದರ ಪರಿಣಾಮವಾಗಿ ಅವರು ಸುಮಾರು ಎರಡು ಶತಮಾನಗಳ ಕಾಲ ಪ್ರೌಢ ಕಾವ್ಯ ರಚನೆ ಮಾಡಿದರು. ಭಾಷೆಯ ಶಾಸ್ತ್ರೀಯ ಬಳಕೆ, ವಿಭಿನ್ನ ಛಂದೋರೂಪಗಳು, ವಿವಿಧ ಅಲಂಕಾರಗಳ ಪರಿಣಾಮಕಾರೀ ಬಳಕೆ, ರಸಭಾವಗಳ ಅಭಿವ್ಯಕ್ತಿ, ಧ್ವನಿಯುಕ್ತತೆ, ನಾಟಕೀಯ ಗುಣ, ಪಾತ್ರ ಮತ್ತು ಸನ್ನಿವೇಶ ರಚನೆಗಳ ಕೌಶಲ, ವಸ್ತು ಸಂವಿಧಾನ ನಿಪುಣತೆ, ಹಾಗೂ ಲೋಕ ಜ್ಞಾನದ ವಿಷಯಗಳಲ್ಲಿ ಹಳಗನ್ನಡದ ಕವಿಗಳು ಇನ್ನಿಲ್ಲದ ಸಾಧನೆ ಮಾಡಿದ್ದಾರೆ. ಕಾವ್ಯ–ಶಾಸ್ತ್ರ ಪರಿಣತರಿಗೆ ತುಂಬ ಸಂತೋಷ ನೀಡಬಲ್ಲ ಈ ರಚನೆಗಳು ಕನ್ನಡ ಅಭಿಜಾತ ಸಾಹಿತ್ಯದ ಗರಿಮೆಯನ್ನು ಬಹಳ ಎತ್ತರಕ್ಕೆ ಏರಿಸಿವೆ.

**ಹಾಡುವವರ ಹಾಗೂ ಕೇಳುವವರ ಕಡೆಗೆ ಹೊರಳಿಕೊಂಡ ಕನ್ನಡ ಕಾವ್ಯ:**

ಹಳನ್ನಡದಲ್ಲಿ ರಚನೆಯಾದ ಮಹಾಭಾರತ, ರಾಮಾಯಣ ಮತ್ತು ಇತರ ಆಗಮಿಕ ಕಾವ್ಯಗಳು ಮಧ್ಯಕಾಲೀನ ಸಂದರ್ಭದಲ್ಲಿ ಹೊಸರೂಪ ಪಡೆದುಕೊಂಡುವು. ಈ ನಡುವೆ ಕರ್ನಾಟಕವು ವಚನ ಚಳವಳಿಗೆ ಸಾಕ್ಷಿಯಾಯಿತು. ವಚನಚಳುವಳಿಯು ಭಾಷೆಯ ಬಗ್ಗೆ ಕ್ರಾಂತೀ ಕಾರೀ ನಿಲುವನ್ನು

ತಾಳಿತು. ಅಲ್ಲಿಯ ವರೆಗೆ ಪಂಡಿತ ಮಾನ್ಯವಾದ ಭಾಷೆ ಮತ್ತು ಛಂದೋರೂಪುಗಳನ್ನು ವಚನಕಾರರು ಅತ್ಯಂತ ಸರಳಗೊಳಿಸಿ ಸಾಮಾನ್ಯ ಜನರನ್ನು ತಲುಪಲು ಪ್ರಯತ್ನಿಸಿ ಯಶಸ್ವಿಯಾದರು. ಅನುಭವ ಮಂಟಪದಲ್ಲಿ ಸೇರಿದ್ದರು ಎನ್ನಲಾದ ವಚನಕಾರರಲ್ಲಿ ಹೆಚ್ಚಿನವರು ತಳವರ್ಗಕ್ಕೆ ಸೇರಿದವರು ಎಂಬುದರ ಕುರಿತು ನಮಗೆ ಇವತ್ತು ಯಾವ ಸಂಶಯವೂ ಉಳಿದಿಲ್ಲ. ಈ ಚಳುವಳಿಯ ಆನಂತರ ಬಂದ ಕವಿಗಳೆಲ್ಲರೂ ಕಾವ್ಯವನ್ನು ಜನಮುಖಿಗೊಳಿಸಿದರು.

ಪಂಪನ ಆನಂತರ ವ್ಯಾಸ ಭಾರತವನ್ನು ಅಷ್ಟೇ ಸಮರ್ಥವಾಗಿ ಮತ್ತೆ ಬರೆದ ಕುಮಾರವ್ಯಾಸನು ಹೇಳಿದ ಈ ಕೆಳಗಿನ ಮಾತನ್ನು ಗಮನಿಸೋಣ–

*ವೀರ ನಾರಾಯಣನೆ ಕವಿ ಲಿಪಿ*
*ಕಾರ ಕುವರ ವ್ಯಾಸ ಕೇಳುವ*
*ಸೂರಿಗಳು ಸನಕಾದಿಗಳು ಜಂಗಮ*
*ಜನಾರ್ಧನರು*
*ಚಾರು ಕವಿತೆಯ ಬಳಕೆಯಲ್ಲ ವಿ*
*ಚಾರಿಸುವಡಳವಲ್ಲ ಚಿತ್ತವ*
*ಧಾರು ಹೋ ಸರ್ವಜ್ಞರಾದರು ಸಲುಗೆ ಬಿನ್ನಪವ*

ಇಲ್ಲಿ ಕುಮಾರವ್ಯಾಸನು ಸನಕಾದಿ ವಿದ್ವಾಂಸರ ನಡುವೆ ಜಂಗಮ ಜನಾರ್ಧನರನ್ನೂ ಸೇರಿಸಿದ್ದಾನೆ. ಅಂದರೆ ಇದೀಗ ಕಾವ್ಯದ ಗ್ರಾಹಕರು ಬದಲಾಗಿದ್ದಾರೆ ಎಂದಾಯಿತು. ಆದರೆ ಲಿಪಿ ತಿಳಿಯದ ಜಂಗಮ ಜನಾರ್ಧನರು ಕಾವ್ಯವನ್ನು ಓದುವ ಬಗೆ ಹೇಗೆ? ಅದಕ್ಕಾಗಿ ಕುಮಾರವ್ಯಾಸನು 'ಕೇಳುವ ಸೂರಿಗಳು' ಎಂಬ ಪದವನ್ನು ಬಳಸಿದ್ದಾನೆ. ಇವರು ಓದುವ ಸೂರಿಗಳಲ್ಲ. ಮೂಲ ಭಾರತದಲ್ಲೂ ಜನಮೇಜಯನಿಗೆ ಕತೆಯನ್ನು ಹೇಳಲಾಗುತ್ತದೆ. ಹಾಗೆ ಇಲ್ಲಿಯೂ ಜಂಗಮ ಜನಾರ್ಧನರಿಗೆ ಕಾವ್ಯವನ್ನು 'ಕೇಳಿಸಲಾಗುತ್ತ'ದೆ.

ಪಂಪಾದಿಗಳು ಬರೆದ ಓದುವ ಕಾವ್ಯವು ಹೀಗೆ ಕೇಳುವ ಕಾವ್ಯವಾಗಿ ಮರು ಸೃಷ್ಟಿ ಹೊಂದಿತು. ಜನರು ಕೇಳುವುದಕ್ಕಾಗಿ ಕಾವ್ಯವನ್ನು ಹಾಡಲು ಅನುಕೂಲವಾಗುವಂತೆ ಬರೆಯಲಾಯಿತು. ಕುಮಾರವ್ಯಾಸ ಈ ಕುರಿತು ಹೀಗನ್ನುತ್ತಾನೆ–

ತಿಳಿಯ ಹೇಳುವೆ ಕೃಷ್ಣ ಕತೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮ ಶ್ರುತಿಯನೊರೆವೆನು ಕೃಷ್ಣ
ಮೆಚ್ಚಲಿಕೆ

ಈ ಪಂಚಮ ಶ್ರುತಿಯೇ ಪ್ರಧಾನವಾಗಿ ಇವತ್ತಿಗೂ ಕರ್ನಾಟಕ ಭಾರತ ಕಥಾ ಮಂಜರಿಯು ಜನಮಾನಸದಲ್ಲಿ ಉಳಿದಿದೆ. ಈ ಕಾವ್ಯದ ಜೊತೆಗೆ ಬಂದ ರಾಘವಾಂಕನ ಹರಿಶ್ಚಂದ್ರ ಕಾವ್ಯ, ಲಕ್ಷ್ಮೀಶನ ಜೈಮಿನಿ ಭಾರತ, ತೊರವೆಯ ನರಹರಿಯ ತೊರವೆ ರಾಮಾಯಣ ಮೊದಲಾದ ನಡುಗಾಲದ ಕನ್ನಡ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡಲು ಅನುಕೂಲವಾಗುವಂತೆ ಬರೆಯಲಾಯಿತು. ಶರ, ಕುಸುಮ, ಭೋಗ ಭಾಮಿನಿ, ಪರಿವರ್ಧಿನಿ ಮತ್ತು ಮತ್ತು ವಾರ್ಧಕ ಷಟ್ಪದಿಗಳು ಎಲ್ಲ ಕಾವ್ಯಗಳನ್ನೂ ಆವರಿಸಿಕೊಂಡವು. ಇದರಲ್ಲಿಯೂ *–3 4 3 4 3 4 3 4–3 4 3 4 3 4 2* –ನಡೆಯು ಕನ್ನಡಿಗರಿಗೆ ಬಹಳ ಇಷ್ಟವಾಯಿತು.

ನಂಜುಂಡ ಕವಿಯು ತನ್ನ ರಾಮನಾಥ ಚರಿತೆ ಮತ್ತು ರತ್ನಾಕರ ವರ್ಣಿಯು ತನ್ನ ಭರತೇಶ ವೈಭವದಲ್ಲಿ ಕನ್ನಡ ಜಾನಪದಲ್ಲಿ ಜನಪ್ರಿಯವಾಗಿದ್ದ ಸಾಂಗತ್ಯವನ್ನು ಬಳಸಿಕೊಂಡರು. ಈ ಛಂದೋ ರೂಪಗಳು ದೊಡ್ಡ ಸಂಖ್ಯೆಯಲ್ಲಿದ್ದ ಸಾಮಾನ್ಯ ಕನ್ನಡಿಗರನ್ನು ತಲುಪಲು ಕವಿಗಳು ಮಾಡಿದ ಮಹಾನ್ ಪ್ರಯತ್ನಗಳೇ ಆಗಿವೆ. ಆ ಕಾಲದಲ್ಲಿ ಬಂದ ರಾಮಾಯಣ ಕೃತಿಗಾದರೂ ಅಷ್ಟೆ. ಅವು ನಾಗಚಂದ್ರ ಹಿಡಿದ ಪಂಡಿತರ ಹಾದಿಯನ್ನು ಬಿಟ್ಟು 'ಜಂಗಮ ಜನಾರ್ಧನರ'ನ್ನು ತಮ್ಮ ಕೇಂದ್ರದಲ್ಲಿರಿಸಿಕೊಂಡರು. ಕುಮುದೇಂದುವಿನ 'ಕುಮುದೇಂದು ರಾಮಾಯಣ' (1270), ನಾಗರಾಜನ 'ಪುಣ್ಯಾಸ್ರವ' (1270), ದೇವಪ್ಪನ 'ರಾಮವಿಜಯ' (1331), ಚಂದ್ರಶೇಖರನ 'ರಾಮಚಂದ್ರ ಚರಿತ (1700), ದೇವಚಂದ್ರನ 'ರಾಮಕಥಾವತಾರ' (1800) ಮೊದಲಾದ ಜೈನ ರಾಮಾಯಣಗಳ ಸ್ವರೂಪವೇ ಬೇರೆ. ಕುಮಾರ ವಾಲ್ಮೀಕಿಯ 'ತೊರವೆ ರಾಮಾಯಣ' (ಕ್ರಿ. ಶ. 1500), ಚಾಮರಾಜನ 'ರಾಮಾಯಣ' (ಕ್ರಿ. ಶ. 1630), ತಿಮ್ಮರಸನ 'ಮಾರ್ಕಾಂಡೇಯ ರಾಮಾಯಣ' (1650), ಮಲ್ಲರಸನ 'ದಶಾವತಾರ ಚರಿತೆ' (1680), ಶಂಕರನಾರಾಯಣನ 'ಆಧ್ಯಾತ್ಮ ರಾಮಾಯಣ' (1700) ಮತ್ತಿತರ ಕೃತಿಗಳು ಮಧ್ಯಕಾಲೀನ ಕರ್ನಾಟಕದಲ್ಲಿ ಸಾಮಾನ್ಯ ಕನ್ನಡಿಗರನ್ನು ತಲುಪಲೆಂದೇ ರಚಿತವಾದುವು.

***ಡಾ. ಪುರುಷೋತ್ತಮ ಬಿಳಿಮಲೆ***
***(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)***

# ಬೈಕ್ ಸವಾರ ಸೂರಜ್ ಜೋಶಿ ಅವರಿಗೆ ಅಭಿನಂದನೆ



ಮೋಟಾರ್ ಸೈಕಲ್ ಸವಾರನಾಗಿ ದೇಶದ ವಿವಿಧ ನಗರಗಳನ್ನು ಸುತ್ತಿ ದೆಹಲಿಗೆ ಆಗಮಿಸಿದ ಸಂದರ್ಭದಲ್ಲಿ ಯುವಕ ಶ್ರೀ ಸೂರಜ ಜೋಶಿಯವರನ್ನು ಅಭಿನಂದಿಸಿ ಪ್ರೋತ್ಸಾಹಿಸುವಂತ ಒಂದು ವಿಶಿಷ್ಠ ಶ್ಲಾಘನೀಯ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘವು ಇದೇ ಜೂನ್ 30ರಂದು ಸಂಘದ ಆವರಣದಲ್ಲಿ ಆಯೋಜಿಸಿತ್ತು.

ಕಾರ್ಕಳ ತಾಲೂಕಿನ ಶ್ರೀಮತಿ ಶೈಲಜಾ ಹಾಗೂ ಚಂದ್ರಶೇಖರ್ ಅವರ ಪುತ್ರ ಶ್ರೀ ಸೂರಜ್ ಜೋಶಿ ಯವರು ಬಿ.ಇ. ಪದವೀಧರರಾಗಿದ್ದು ಬೆಂಗಳೂರಿನ ಖಾಸಗಿ ಕಂಪನಿಯೊಂದರ ನೌಕರರಾಗಿದ್ದು ಈ ಸಾಹಸೀ ಮೋಟಾರ ಸೈಕಲ್ ಭಾರತ ಯಾತ್ರೆಯನ್ನು ಕೆಲಸಕ್ಕೆ ರಜೆ ಹಾಕಿ ಸ್ವಂತ ಹಣ ವ್ಯಯಿಸಿ ಕೈಗೊಂಡಿದ್ದಾರೆ. "ಕೋಶ ಓದಿದ್ದಕ್ಕಿಂತ ದೇಶ ತಿರುಗುವುದರಿಂದ ತಮಗೆ ದೊರೆತ ಅನುಭವ ವಿಭಿನ್ನ" ಎಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ ಯುವಕ ಜೋಶಿಯವರು ನೆರೆದಿದ್ದ ಸಭಿಕರಲ್ಲಿ ತಮ್ಮ ರೋಚಕ ಅನುಭವ ಹಂಚಿಕೊಂಡರು. ತಮ್ಮ ಯಾತ್ರೆಯನ್ನು ಬೆಂಗಳೂರಿನಿಂದ ಪ್ರಾರಂಭಿಸಿದ ಇವರು ಪುಣೆ, ಬರೋಡ, ಉದಯಪುರ, ಜೈಪುರ್, ದೆಹಲಿ, ಲುಧಿಯಾನಾ, ಪಠಾಣ್‌ಕೋಟ್, ಶ್ರೀನಗರ, ಲೇಹ್‌ನ ನುಬ್ರಾ ಕಣಿವೆ, ಪೆಂಗಾಂಗ್‌ಸೋ ಸರೋವರ, ಸರ್ಚು ಕಣಿವೆ, ಮನಾಲಿ, ಚಂಡೀಗಢ, ಅಮೃತಸರ ಮಾರ್ಗವಾಗಿ ದೆಹಲಿಗೆ ಬಂದಿಳಿದಿರುವುದಾಗಿ ತಿಳಿಸಿದರು. ಇಲ್ಲಿಂದ ತಮ್ಮ ಯಾತ್ರೆಯನ್ನು ಮುಂದುವರೆಸಿ ಗ್ವಾಲಿಯರ್, ನಾಗ್ಪುರ್, ಹೈದ್ರಾಬಾದ್ ಮಾರ್ಗದ ಮೂಲಕ ಬೆಂಗಳೂರು ತಲುಪುವುದಾಗಿ ಹೇಳಿದರು.

ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅಭಿನಂದನಾ ಸಮಾರಂಭಕ್ಕೆ ಆಗಮಿಸಿದ ಸಭಿಕರಿಗೆ ಶ್ರೀ ಸೂರಜ್ ಜೋಶಿಯವರನ್ನು ಪರಿಚಯಿಸುತ್ತ ಸ್ವಾಗತಿಸಿದರು. ಸಮಾರಂಭದಲ್ಲಿ ಉಪಸ್ಥಿತರಿದ್ದ ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ, ಈ.ಸಿ. ವಿದ್ಯಾಸಾಗರ್ ಚೆನ್ನು ಎಸ್. ಮಠದ, ಚಿತ್ತರಂಜನ್ ದಾಸ್ ಇವರುಗಳು ತಮ್ಮ ತಮ್ಮ ಜೀವನದಲ್ಲಿ ಮಾಡಿದ ಪ್ರವಾಸದ ಸಿಹಿ ಕಹಿ ಅನುಭವ ಹಂಚಿಕೊಂಡು ಯುವಕ ಸೂರಜ್‌ರ ಉತ್ಸಾಹ ಇಮ್ಮಡಿಸಿ ಪ್ರೋತ್ಸಾಹಿಸಿದರು. ಕೊನೆಯಲ್ಲಿ ದೆಹಲಿ ಕರ್ನಾಟಕ ಸಂಘದ ಪರವಾಗಿ ಹೂಗುಚ್ಛ ಹಾಗು ಫಲಕ ನೀಡಿ ಯುವಕ ಸೂರಜ್ ಅವರನ್ನು ಗೌರವಿಸಲಾಯಿತು. ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ ಅವರು ವಂದನಾರ್ಪಣೆ ಸಲ್ಲಿಸಿದರು.

***ಚೆನ್ನು ಎಸ್. ಮಠದ***

# ವಚನ ಪಿತಾಮಹಾ ಫ.ಗು. ಹಳಕಟ್ಟಿ ನೆನಪು



ಅದೊಂದು ಧಾರವಾಡದ ಕಡು ಬೇಸಿಗೆಯ ದಿನ. 1955ರ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ವಚನ ಸಾಹಿತ್ಯದ ಪಿತಾಮಹನೆಂಬ ಬಿರುದಿಗೆ ಪಾತ್ರರಾಗಿದ್ದ ಫ. ಗು. ಹಳಕಟ್ಟಿಯವರಿಗೆ ಗೌರವ ಡಾಕ್ಟರೇಟ್ ನೀಡಿದ ದಿನ. ಘಟಿಕೋತ್ಸವ ಕಾರ್ಯಕ್ರಮದ ನಂತರ ಅತಿಥಿಗಳಿಗೆ ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ಭೋಜನಕೂಟ ಏರ್ಪಡಿಸಲಾಗಿತ್ತು. ಡಾಕ್ಟರೇಟ್ ಪದವಿ ಸ್ವೀಕರಿಸಲು ಕೋಟು, ಕಚ್ಚೆ, ಪೇಟ ಧರಿಸಿ ಬಂದಿದ್ದ ಹಳಕಟ್ಟಿಯವರು ಔತಣಕೂಟದಲ್ಲಿ ಪಾಲ್ಗೊಂಡು ಊಟಕ್ಕೆ ಕುಳಿತರು. ಆಗ ವಿ.ವಿ.ಯ ರಿಜಿಸ್ಟ್ರಾರ್ ಆಗಿದ್ದ ಒಡೆಯರ್ ಹಳಕಟ್ಟಿಯವರನ್ನು ಉದ್ದೇಶಿಸಿ 'ಸಾರ್ ಸೆಖೆ ಬಾಳಾ ಇದೆ. ಕೋಟ್ ತೆಗೆದು ಆರಾಮಾಗಿ ಊಟ ಮಾಡ್ರಲಾ' ಎಂದರು. ಆಗ ಹಳಕಟ್ಟಿಯವರು ಒಡೆಯರ್‌ರವರನ್ನು ಹತ್ತಿರ ಕರೆದು 'ತಮ್ಮಾ ಕೋಟಿನ ಒಳಗಾ ಅಂಗಿ ಪೂರಾ ಹರಿದು ಹೋಗದ, ಅದಕ್ಕ ನಾ ಕೋಟ್ ಹಾಕ್ಕಂಡಿದೀನಿ. ನಾನು ಸಖೆ ತಡಿತೀನಿ ತಮ್ಮಾ ಆದರ ಅವಮಾನ ತಡಿಯಾಂಗಿಲ್ಲ' ಎಂದಾಗ ಒಡೆಯರ್ ಮೂಕ ವಿಸ್ಮಿತರಾಗಿ ನಿಂತರು.

ಮುಂಬೈನಲ್ಲಿ 1904ರಲ್ಲಿ ವಕೀಲಿ ಶಿಕ್ಷಣ ಮುಗಿಸಿ, ಪದವಿಯೊಂದಿಗೆ ಬಿಜಾಪುರಕ್ಕೆ ಬಂದ ಹಳಕಟ್ಟಿಯವರು ಬಯಸಿದ್ದರೆ ವಕೀಲಿ ವೃತ್ತಿಯಲ್ಲೇ ಶ್ರೀಮಂತರಾಗುವ ಅವಕಾಶವಿತ್ತು. ಆದರೆ ಎಲ್ಲದಕ್ಕೂ ತಿಲಾಂಜಲಿ ಇತ್ತು, ಸಮಾಜಸೇವೆ, ವಚನ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗಾಗಿ ತಮ್ಮ ಬದುಕನ್ನು ಮೀಸಲಾಗಿರಿಸಿ, ಗಂಧದ ಕೊರಡಿನಂತೆ ಜೀವ ತೆಯ್ದು ತಮ್ಮ ಕೊನೆಯ ದಿನಗಳಲ್ಲಿ ಬಡತನವನ್ನೇ ಹಾಸಿ-ಹೊದ್ದು ಬದುಕಿದ ಫ.ಗು. ಹಳಕಟ್ಟಿ ಎಂಬ ನಿಷ್ಕಳಂಕ ಕರ್ಮಯೋಗಿಯ ಕರುಣಾಜನಕ ಕಥನವಿದು.

ಹಳಕಟ್ಟಿಯವರ ಜನ್ಮಭೂಮಿ ಧಾರವಾಡ. ಆದರೆ ಕರ್ಮಭೂಮಿಯನ್ನಾಗಿ ಅವರು ಆರಿಸಿಕೊಂಡಿದ್ದು ಬಿಜಾಪುರವನ್ನು. 1860ರ ಜುಲೈ 2ರಂದು ಧಾರವಾಡದಲ್ಲಿ ಗುರುಬಸಪ್ಪ, ದಾನಮ್ಮ ದಂಪತಿಗಳ ಪುತ್ರನಾಗಿ ಜನಿಸಿದ ಹಳಕಟ್ಟಿಯವರು ಪ್ರೌಢಶಾಲೆಯವರೆಗೆ ಧಾರವಾಡದಲ್ಲೇ ಓದಿದರು. ಆ ಕಾಲದಲ್ಲಿ ಅವರ ತಂದೆ ಗುರುಬಸಪ್ಪ ಧಾರವಾಡದ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಧಾರವಾಡದ ಲಿಂಗಾಯಿತ ವಿದ್ಯಾ ಅಭಿವೃದ್ಧಿ ಸಂಸ್ಥೆ ಹಾಗೂ ವಿದ್ಯಾವರ್ಧಕ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು.

ಮುಂಬೈ ನಗರದಲ್ಲಿ ಬಿ.ಎ. ಪದವಿ ಹಾಗೂ ಎಲ್.ಎಲ್.ಬಿ. ಪದವಿ ಪೂರೈಸಿ ವಕೀಲ ವೃತ್ತಿಗಾಗಿ 1904ರಲ್ಲಿ ಬಿಜಾಪುರಕ್ಕೆ ಬಂದ ಫ.ಗು. ಹಳಕಟ್ಟಿಯವರು ತಮ್ಮ ಕಡೆಯ ಉಸಿರಿರುವ ತನಕ ಬಿಜಾಪುರವನ್ನು ಕಾಯಕ ಭೂಮಿಯನ್ನಾಗಿಸಿಕೊಂಡರು.

ಇಪ್ಪತ್ತನೇ ಶತಮಾನದ ಪ್ರಾರಂಭದ ಆ ದಿನಗಳಲ್ಲಿ ಆಂಗ್ಲರ ಆಡಳಿತ ಹಾಗೂ ಅವರು ತಂದಿತ್ತ ಶಿಕ್ಷಣದ ಸುಧಾರಣೆಗಳಿಂದ ಸಮಾಜದಲ್ಲಿ ಎಚ್ಚರಿಕೆ ಮೂಡುತ್ತಿದ್ದ ಕಾಲವಾಗಿತ್ತು. ಆಧುನಿಕ ಶಿಕ್ಷಣ ಪಡೆದಿದ್ದ ಹಳಕಟ್ಟಿ ಮನಸ್ಸು ಮಾಡಿದ್ದರೆ ಸರ್ಕಾರದಲ್ಲಿ ಘನತರವಾದ ಹುದ್ದೆ ಪಡೆಯಬಹುದಿತ್ತು. ಇಲ್ಲವೆ ತಮ್ಮ ವಕೀಲಿ ವೃತ್ತಿಯಿಂದ ಶ್ರೀಮಂತಿಕೆ ದಕ್ಕಿಸಿಕೊಳ್ಳಬಹುದಿತ್ತು. ಆದರೆ ಬಿಜಾಪುರಕ್ಕೆ ಬಂದ ಅವರು ಅಲ್ಲಿ ತಾಂಡವವಾಡುತ್ತಿದ್ದ ಬಡತನ, ಅನಕ್ಷರತೆ, ರೈತರು ಕೃಷಿ ಉತ್ಪನ್ನ ಮಾರಾಟಕ್ಕೆ ಪರದಾಡುತ್ತಿದ್ದ ಪರಿ ಇವೆಲ್ಲವನ್ನು ಮನಗಂಡು ಸಮಾಜ ಸೇವೆಗೆ ತಮ್ಮ ಬದುಕನ್ನು ಮೀಸಲಾಗಿಸಿದರು.

ತಮ್ಮ ತಂದೆಯಂತೆ ಬಿಜಾಪುರದಲ್ಲಿ, ಬಿಜಾಪುರ ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ ಹುಟ್ಟುಹಾಕಿದರಲ್ಲದೆ, ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಸಿದ್ದೇಶ್ವರ ಸಹಕಾರಿ ಬ್ಯಾಂಕ್ ಸ್ಥಾಪಿಸಿದರು. ಸಮಾಜ ಸೇವೆಯ ಜೊತೆ ಜೊತೆಗೆ ಸಾಹಿತ್ಯದಲ್ಲಿ ಆಸಕ್ತಿ ಇದ್ದ ಹಳಕಟ್ಟಿ ಮೊದಲಿಗೆ ಬಸವಣ್ಣನವರ ವಚನಗಳನ್ನು ಇಂಗ್ಲೀಷ್‌ಗೆ ಅನುವಾದ ಮಾಡುವುದರ ಮೂಲಕ (1922) ವಚನ ಸಾಹಿತ್ಯ ಸಂಗ್ರಹಣೆ, ಪ್ರಕಟಣೆಗೆ ಕೈಹಾಕಿದರು. ಮುಂದೆ ಈ ಪ್ರವೃತ್ತಿಯೇ ಅವರಿಗೆ ಧ್ಯಾನವಾಯಿತು. ಹನ್ನೆರಡನೇ ಶತಮಾನದ ಶಿವಶರಣರ ವಚನಗಳನ್ನು ಸಂಗ್ರಹಿಸುವುದು ಅವುಗಳಲ್ಲಿ ಇರಬಹುದಾದ ಧಾರ್ಮಿಕ ಹಾಗೂ ವೈಚಾರಿಕ ಮಹತ್ವದ ಚಿಂತನೆಗಳನ್ನು ಸಾದರಪಡಿಸುವುದು ಇದು ಫ.ಗು. ಹಳಕಟ್ಟಿಯವರ ಜೀವನ ಮಂತ್ರವಾಯಿತು.

ಹಳಕಟ್ಟಿಯವರು 1910ರಲ್ಲಿ ಬಿ.ಎಲ್.ಡಿ.ಇ. ಸಂಸ್ಥೆ, 1912ರಲ್ಲಿ ಸಿದ್ದೇಶ್ವರ ಸಂಸ್ಥೆ, 1913ರಲ್ಲಿ ಸಹಕಾರಿ ಸಂಘ, 1914ರಲ್ಲಿ ಸಿದ್ದೇಶ್ವರ ಹೈಸ್ಕೂಲು ಸ್ಥಾಪಿಸಿ 1919ರಲ್ಲಿ ಬಿಜಾಪುರದ ನಗರಸಭಾ ಸದಸ್ಯರಾಗಿ, 1920ರಲ್ಲಿ ಮುಂಬೈ ವಿಧಾನಸಭಾ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರೂ ಅವರು ಎಲ್ಲೆಡೆ ತಮ್ಮ ಶುದ್ಧ ಹಸ್ತ ಮತ್ತು ಪ್ರಾಮಾಣಿಕ ಹಾಗೂ ಪಾರದರ್ಶಕ ಬದುಕಿನೊಂದಿಗೆ ಗುರುತಿಸಿಕೊಂಡರು.

'ವಚನಶಾಸ್ತ್ರಸಾರ' ಎಂಬ ಬೃಹತ್ ವಚನ ಸಂಕಲನವನ್ನು 1923ರಲ್ಲಿ ಹೊರತರುವ ಮೂಲಕ ವಚನಗಳ ಸಂಗ್ರಹಕ್ಕೆ ಕೈಹಾಕಿದ ಹಳಕಟ್ಟಿಯವರು ಇವುಗಳ ಪ್ರಕಟಣೆಗಾಗಿ 1926ರಲ್ಲಿ 'ಹಿತಚಿಂತಕ' ಎಂಬ ಮುದ್ರಣಾಲಯ ಪ್ರಾರಂಭಿಸಿ 'ಶಿವಾನುಭಾವ' ಎಂಬ ಪತ್ರಿಕೆಯನ್ನೂ ಆರಂಭಿಸಿದರು. ಈ ಪತ್ರಿಕೆಯಲ್ಲಿ 1926ರಿಂದ 1961ರವರೆಗೆ ನಿರಂತರವಾಗಿ ವಚನಗಳ ಬಗ್ಗೆ, ಶಿವಶರಣರ ಬಗ್ಗೆ ಹಳಕಟ್ಟಿಯವರು ಬರೆದ ಲೇಖನಗಳ ಸಂಗ್ರಹಗಳು ಒಟ್ಟು 72 ಕೃತಿಗಳಾಗಿ ಹೊರಹೊಮ್ಮಿವೆ. ಇವುಗಳ ಜೊತೆ ಅನ್ಯರ ಕೃತಿಗಳು ಸೇರಿ 105 ಕೃತಿಗಳನ್ನು ಪ್ರಕಟಿಸಿದ್ದಾರೆ. ಎಂದೂ ವ್ಯವಸ್ಥೆಯೊಂದಿಗೆ ರಾಜಿಯಾಗದೆ ವಚನಗಳಲ್ಲಿ ಅಡಗಿರುವ ಶಿವಶರಣರ ತತ್ವ ಮತ್ತು ಚಿಂತನೆಗಳನ್ನು ಜನತೆಗೆ ತಿಳಿಸುವುದೇ ಜೀವನದ ಪರಮ ಗುರಿ ಎಂದು ನಂಬಿಕೊಂಡಿದ್ದ ಹಳಕಟ್ಟಿಯವರು ತಮ್ಮ ಜೀವಿತದ ಕೊನೆಯವರೆಗೂ ಬಿಜಾಪುರದಲ್ಲಿ ಸ್ವಂತ ಮನೆ ಮಾಡಿಕೊಳ್ಳದೆ ಫಕೀರನಂತೆ ಬದುಕಿಬಿಟ್ಟರು. ತುಂಬ ಕಷ್ಟದಲ್ಲಿ ನಡೆಯುತ್ತಿದ್ದ ಪತ್ರಿಕೆಗೆ ಯಾರಾದರು ಎರಡು ರೂಪಾಯಿ ಸಹಾಯಧನ ಮಾಡಿದರೆ ಅದನ್ನು ಅವರ ಹೆಸರಿನೊಂದಿಗೆ ಪ್ರಕಟಿಸಿ ಕೃತಜ್ಞತೆ ಅರ್ಪಿಸುತ್ತಿದ್ದರು.

ತಾವು ಈ ರೀತಿ ಕಷ್ಟಗಳ ಸರಮಾಲೆಯ ನಡುವೆ ಬದುಕಿದ್ದರ ಬಗ್ಗೆ ಅವರು ಎಂದೂ ವಿಷಾದ ಪಡಲಿಲ್ಲ. ತಮ್ಮ 'ನನ್ನ 75 ವರ್ಷಗಳು' ಎಂಬ ಕೃತಿಯಲ್ಲಿ ತನ್ನ ಸಾಧನೆಯ ಹಿಂದೆ ಬೆನ್ನೆಲುಬಾಗಿ ನಿಂತ ತಂದೆ ಗುರುಬಸಪ್ಪ ಹಾಗೂ ಹೆಣ್ಣು ಕೊಟ್ಟ ಮಾವ ತಮ್ಮಣ್ಣಪ್ಪ ಇವರನ್ನು ಹಳಕಟ್ಟಿಯವರು ತುಂಬು ಹೃದಯದಿಂದ ಸ್ಮರಿಸಿದ್ದಾರೆ. ಇವತ್ತಿನ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಲಭ್ಯವಾಗುತ್ತಿರುವ ಸಮಗ್ರ ವಚನ ಸಾಹಿತ್ಯದ ಹಿಂದೆ ಫ.ಗು. ಹಳಕಟ್ಟಿಯವರ ಅರ್ಧ ಶತಮಾನದ ಶ್ರಮವಿದೆ. ಈ ಕಾರಣಕ್ಕಾಗಿ ಕನ್ನಡ ನಾಡು ಅವರನ್ನು 'ವಚನ ಪಿತಾಮಹ' ಎಂಬ ಬಿರುದು ನೀಡಿ ಗೌರವಿಸಿದೆ.

ಹಳಕಟ್ಟಿಯವರು ಸ್ಥಾಪಿಸಿದ ಬಿ.ಎಲ್.ಡಿ.ಇ. ಸಂಸ್ಥೆ ಇಂದು ವೈದ್ಯಕೀಯ, ಇಂಜಿನಿಯರಿಂಗ್ ಕಾಲೇಜು, ಆಸ್ಪತ್ರೆ ಸೇರಿದಂತೆ 108 ಶಿಕ್ಷಣ ಸಂಸ್ಥೆಗಳೊಂದಿಗೆ ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಕಾರಣಕ್ಕಾಗಿ ಸಂಸ್ಥೆಯ ಆಡಳಿತ ಚುಕ್ಕಾಣಿ ಹಿಡಿದಿರುವ ಎಂ.ಬಿ. ಪಾಟೀಲರು ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ ಸ್ಥಾಪಿಸಿ ಅವರ ಸಮಗ್ರ ಸಾಹಿತ್ಯವನ್ನು ಖ್ಯಾತ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿ ನೇತೃತ್ವದಲ್ಲಿ 15 ಬೃಹತ್ ಸಂಪುಟಗಳಲ್ಲಿ ಹೊರತಂದಿದ್ದಾರೆ.

ಕಳೆದ ಹತ್ತು ವರ್ಷಗಳ ಹಿಂದೆ ಬಿಜಾಪುರ ನಗರ ಸಭೆ, ಅಲ್ಲಿನ ಒಂದು ರಸ್ತೆಗೆ ಹಳಕಟ್ಟಿಯವರ ಹೆಸರಿಡಲು ಸಭೆ ಸೇರಿ, ಅವರು ವಾಸವಾಗಿದ್ದ ಪ್ರದೇಶಗಳ ಬಗ್ಗೆ ಮಾಹಿತಿ ಕಲೆ ಹಾಕಿತು. ಫ. ಗು. ಹಳಕಟ್ಟಿಯವರು ಬಿಜಾಪುರದ ಎಲ್ಲಾ ಬಡಾವಣೆಗಳಲ್ಲೂ ಒಂದು ಅಥವಾ ಎರಡು ವರ್ಷ ವಾಸವಾಗಿದ್ದರು. ಮನೆಯ ಬಾಡಿಗೆ ಹೆಚ್ಚಾಗುತ್ತಿದ್ದಂತೆ, ತಮ್ಮ ವರಮಾನಕ್ಕೆ ತಕ್ಕಂತೆ ಬಾಡಿಗೆ ಮನೆ ಹುಡುಕಿ ಹೊರಡುತ್ತಿದ್ದರು. ಇಡೀ ಬಿಜಾಪುರದ ರಸ್ತೆಗಳಿಗೆ ಹಳಕಟ್ಟಿಯವರ ಹೆಸರಿಡಬೇಕಾದ ಸಮಸ್ಯೆ ಎದುರಾಯಿತು. ಅಂತಿಮವಾಗಿ ರಸ್ತೆಗೆ ಹೆಸರಿಡುವ ಬದಲು, ಅಲ್ಲಿನ ಪ್ರಸಿದ್ಧ ಸಿದ್ದೇಶ್ವರ ಗುಡಿ ಎದುರು ಅವರ ಪ್ರತಿಮೆ ಸ್ಥಾಪಿಸಲು ನಿರ್ಧಾರವಾಯಿತು.

ಬಿಜಾಪುರದಲ್ಲಿ ಬಿ.ಎಲ್.ಡಿ. ಸಂಸ್ಥೆ ಸ್ಥಾಪಿಸಿರುವ ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿ ಹಳಕಟ್ಟಿಯವರ ಜೀವನ ಸಾಧನೆಯನ್ನು ಗಮನಿಸಿದಾಗ ಒಬ್ಬ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಇಂತಹ ಸಾಧನೆ ಮಾಡಲು ಸಾಧ್ಯವೆ ಎಂಬ ವಿಸ್ಮಯ ಮೂಡುತ್ತದೆ. ಈ ಕಾರಣಕ್ಕಾಗಿ ಬಿಜಾಪುರ ನಗರಸಭೆ ಸಿದ್ದೇಶ್ವರ ಬ್ಯಾಂಕ್‌ನ ಎದುರು ಹಳಕಟ್ಟಿಯವರ ಆಳೆತ್ತರದ ಪ್ರತಿಮೆ ನಿಲ್ಲಿಸಿ ಗೌರವ ಸೂಚಿಸಿದೆ.

***ಚೆನ್ನು ಎಸ್. ಮಠದ***
***(ಮಾಹಿತಿ ಸೌಜನ್ಯ ಡಾ. ಎಂ.ಎಂ. ಕಲ್ಬುರ್ಗಿ)***

**ಅಭಿನಂದನೆ**

# ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಡಾ. ಎಸ್.ಎಂ. ಕಂಟೀಕರ್ ಮರು ಆಯ್ಕೆ



ಗ್ರಾಹಕರ ಅತ್ಯುನ್ನತ ನ್ಯಾಯಾಲಯ ಎಂದೇ ಪರಿಗಣಿತವಾಗಿರುವ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ (National Consumer Disputes Redressal Commission) ಸದಸ್ಯರಾಗಿ ಕನ್ನಡಿಗ ಡಾ. ಸಿದ್ಧರಾಮೇಶ್ವರ ಕಂಟೀಕರ್ ರವರು ಮತ್ತೊಂದು ಅವಧಿಗೆ ಪುನರಾಯ್ಕೆಗೊಂಡಿದ್ದಾರೆ. 2013 ರಿಂದ 5 ವರ್ಷದ ಅವಧಿಗೆ ಆಯ್ಕೆಯಾಗಿದ್ದ ಡಾ. ಕಂಟೀಕರ್ ಅವರನ್ನು ಜೂನ್ 18 ರಿಂದ ಮತ್ತೊಂದು ಅವಧಿಗೆ ಮುಂದುವರಿಸುವ ಭಾರತ ಸರ್ಕಾರದ ನಿರ್ಧಾರ ಕರ್ನಾಟಕದ ಮಟ್ಟಿಗೆ ಐತಿಹಾಸಿಕವಾದುದು. ಡಾ. ಕಂಟೀಕರ್ ರವರು ತಮ್ಮ ವಿದ್ವತ್ಪೂರ್ಣ ನಿರ್ಣಯಗಳಿಂದ ರಾಷ್ಟ್ರೀಯ ಗ್ರಾಹಕರ ಆಯೋಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ವೈದ್ಯಕೀಯ ವಿಜ್ಞಾನ ಹಾಗೂ ಕಾನೂನುರಂಗ ಎರೆಡರಲ್ಲೂ ಪ್ರವೀಣರಾಗಿರುವ ಡಾ. ಕಂಟೀಕರ್ ರವರದು ಬಹು ಅಪರೂಪದ ಪ್ರತಿಭೆ. ಮೂಲತಃ ವೈದ್ಯ ವೃತ್ತಿಯಲ್ಲಿ 20ಕ್ಕೂ ಅಧಿಕ ವರ್ಷ ಸೇವೆ ಸಲ್ಲಿಸಿ, ಪ್ರಖ್ಯಾತಿಯನ್ನು ಗಳಿಸಿ, 2003 ರಿಂದ 2006 ರ ವರೆಗೂ ಶಿವಮೊಗ್ಗದ ಜಿಲ್ಲಾ ಗ್ರಾಹಕರ ಆಯೋಗದಲ್ಲಿ ಸೇವೆ ಸಲ್ಲಿಸಿದ ಅವರ ದೆಹಲಿಯವರೆಗಿನ ಪ್ರಯಾಣ ಅಸಾಧಾರಣವಾದುದು.

ಅವರು, ರಾಷ್ಟ್ರೀಯ ಗ್ರಾಹಕ ಆಯೋಗದ ಮೊತ್ತ ಮೊದಲ ವೈದ್ಯಕೀಯ ಪರಿಣತ ಸದಸ್ಯ; ಈ ಹುದ್ದೆಯನ್ನಲಂಕರಿಸಿದ ಅತೀ ಕಿರಿಯ ವ್ಯಕ್ತಿ; ಎರಡನೇ ಬಾರಿ ಆಯೋಗದ ಸದಸ್ಯರಾಗಿ ಮುಂದುವರೆಯುತ್ತಿರುವ ಕರ್ನಾಟಕದ ಪ್ರಥಮ ಸದಸ್ಯ....ಹೇಗೆ ಹಲವಾರು ಐತಿಹಾಸಿಕ ದಾಖಲೆ ನಿರ್ಮಿಸಿರುವ ಡಾ. ಕಂಟೀಕರ್‌ರವರು ತಮ್ಮ ಬಿಡುವಿಲ್ಲದ ಕಾರ್ಯಗಳ ನಡುವೆಯೂ, ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ (NLSUI) ಕಾನೂನಲ್ಲಿ ಡಾಕ್ಟರೇಟ್ ಪದವಿ (Ph.D) ಪಡೆಯಲು ತಮ್ಮ ಪ್ರಬಂಧ ಮಂಡಿಸಿದ್ದು, ಇದೇ ಆಗಸ್ಟ್‌ನಲ್ಲಿ ಪದವಿ ದೊರೆಯುವ ಸಾಧ್ಯತೆ ಇದೆ. ಡಾ. ಕಂಟೀಕರ್‌ರವರ ವೈದ್ಯಕೀಯ ಜ್ಞಾನಾಧಾರಿತ ಹಲವಾರು ತೀರ್ಪುಗಳು ವಿವಾದಗಳನ್ನು ಬಗೆಹರಿಸಿದ್ದಷ್ಟೇ ಅಲ್ಲ, ಇಡೀ ದೇಶದ ಕಾನೂನಿನ ಕ್ಷೇತ್ರಕ್ಕೆ ಅಪರಿಮಿತ ಕೊಡುಗೆ ನೀಡಿದೆ. ಭಾರತದ ಸುಪ್ರೀಂ ಕೋರ್ಟ್ ಸಹಾ ಇವರ ತೀರ್ಪನ್ನು ಪ್ರಶಂಸಿಸಿರುವುದು ಡಾ. ಕಂಟೀಕರ್ ಅವರ ಪಾಂಡಿತ್ಯಕ್ಕೆ ಹಿಡಿದ ಕೈ ಕನ್ನಡಿಯಾಗಿದೆ. ಅ

**ಅಭಿಮತ ವರದಿ**


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING


Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com / hpgp2006@gmail.com

Delhi Karnataka Sangha Abhimatha Monthly,
July-2018, Vol. No.28, Issue No.10, Price Rs.1/-
RNI Regn. No. 53405/91, DL-SW-1/4016/16-18
Date of Publication : July 8th / 9th, Posting Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022,
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.



ಸಂಘದ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಗೊಂಡ ಜಿ. ಆರ್. ಮಲ್ಲಾಪೂರ ಅವರ ಒಂದು ಕೃತಿ